# ಮಹಿಳಾ ವಿಶೇಷ


**MAHILA VISHESHA** RNI No. KARKAN/2015/71642

ಕನ್ನಡ ತಿಂಗಳ ಪತ್ರಿಕೆ KANNADA MONTHLY ಜುಲೈ July 1-31 -2018

Vol: 3 Issue : 11 **35** Pages : 16 Price: Rs.10/-

ಸಂಪುಟ: 3 ಸಂಚಿಕೆ: 11 ಪುಟ : 16 ಬೆಲೆ: ರೂ. 10/–



**ಸಂಪಾದಕರು: ಹೆಚ್.ವಿ. ವೆಂಕಟಸುಬ್ಬರಾವ್ ಮೊಬೈಲ್ 8880334444/9243584444**




**ಒಳ ಪುಟಗಳಲ್ಲಿ....**


| | |
|---|---|
| ಪತ್ರಗಳ ಮಾಹಿತಿ– ಕಣಗಿಲೆ (ಕರವೀರ) | 2 |
| ಅಂದದ ಎನಾಮಲ್ ಪೈಂಟ್ ಬಳೆ | 4 |
| ಚಿನ್ನದ ಹೂಡಿಕೆ ಲಾಭದಾಯಕ | 5 |
| ಹೆಂಗಳೆಯರ ವಸ್ತ್ರ ಸಂಹಿತೆ | 7 |
| ಸೆಲ್ಫೀ ಯುಗ | 10 |
| ಬದುಕಲು ಕಲಿಯಿರಿ | 12 |
| ಪರ್ಫೆಕ್ಟ್ ಹ್ಯಾಂಡ್‌ಬ್ಯಾಗ್‌ನ ಕಾಲವಿದು | 14 |
| ಕಿವಿಮಾತು | 15 |


ಯಾವ ವ್ಯಕ್ತಿ ಇನ್ನೊಬ್ಬನನ್ನು ಬೆಳೆಸುವ ದೊಡ್ಡತನವಿರುತ್ತದೋ ಆ ವ್ಯಕ್ತಿ ತನಗರಿವಿಲ್ಲದಂತೆಯೇ ಬಹು ಎತ್ತರಕ್ಕೆ ಬೆಳೆಯುತ್ತಾನೆ.

* * *

ಮನಸ್ಸಿಟ್ಟು ಮಾಡುವ ಕೆಲಸ ಕಷ್ಟಪಟ್ಟು ದುಡಿದ ಹಣ ಹಲವರೊಂದಿಗೆ ಹಂಚಿ ತಿನ್ನುವ ಗುಣ ಭಕ್ತಿಯಿಂದ ಮಾಡುವ ದೇವರ ಆರಾಧನೆ ಎಂದಿಗೂ ನಿಮ್ಮ ಕೈ ಬಿಡುವುದಿಲ್ಲ.

**ರಾಷ್ಟ್ರೀಯ ವೈದ್ಯರ ದಿನ ಹಾಗೂ ವಿಶ್ವ ಜನಸಂಖ್ಯಾ ದಿನದ ಪ್ರಯುಕ್ತ**
**ಪತ್ರಿಕೆಯ ಎಲ್ಲಾ ಓದುಗರಿಗೂ ಶುಭಾಶಯಗಳು**

## 21 ಪತ್ರೆಗಳ ಮಾಹಿತಿ



ಗಣೇಶ ಚತುರ್ಥಿಯ ಶುಭಾಶಯಗಳು. ಗಣೇಶನ ಪೂಜೆಯನ್ನು ಮಾಡುವಾಗ ಅರ್ಚನೆಯಲ್ಲಿ 21 ಬಗೆಯ ಪತ್ರೆ ಅಥವಾ ಎಲೆಗಳ ವಿಧ್ಯುಕ್ತ ಪಾತ್ರವಿದೆ. ಇವು ಔಷಧಿಯ ಗುಣಗಳಿಂದಲೂ ಕೂಡಿದ್ದು, ಆಯುರ್ವೇದದಂಥ ಪ್ರಾಚೀನ ವೈದ್ಯ ಪದ್ಧತಿಯಲ್ಲಿ ಇಂದಿಗೂ ಪರಿಣಾಮಕಾರಿಯಾಗಿ ಬಳಕೆಯಾಗುತ್ತಿವೆ. ವೇದ–ಪುರಾಣ–ಜಾನಪದ ಕಥನ ರಾಶಿಯಲ್ಲಿ ಇವುಗಳ ಉಲ್ಲೇಖಗಳು ಹೇರಳವಾಗಿವೆ. ಒಂದೊಂದೇ ಪತ್ರೆಗಳ ಮಾಹಿತಿಯನ್ನು ನೀಡುವುದೇ ನಮ್ಮ ಉದ್ದೇಶವಾಗಿದೆ.

### 12. ಕಣಗೀಲೆ (ಕರವೀರ)

ಸಂಸ್ಕೃತ: ಕರವೀರ, ಶ್ವೇತಪುಷ್ಪ, ಅಶ್ವಮಾರಕ, ರಕ್ತಪುಷ್ಪ

ವೈಜ್ಞಾನಿಕ ಹೆಸರು: Nerium Odorum

ಮನೆಯಂಗಳದಲ್ಲಿ ಉದ್ಯಾನವನಗಳಲ್ಲಿ ಹಾಗೂ ಮುಖ್ಯವಾಗಿ ದೇವಸ್ಥಾನಗಳ ಅಂಗಳದಲ್ಲಿ ಬಿಳಿ ಹಾಗೂ ಕೆಂಪು ಹೂಗಳನ್ನು ಬಿಡುವ ಕಣಗಿಲೆ ಗಿಡಗಳು ಇದ್ದೇ ಇರುತ್ತವೆ.

ಇದು ಪೊದೆಯಂತೆ ಬೆಳೆಯುವ ಗಿಡ, ದುಂಡಗಿನ ಕಾಂಡದ ತುದಿಯಲ್ಲಿ ಚಿಕ್ಕ ತೊಟ್ಟಿರುವ ಎಲೆಗಳಿರುತ್ತವೆ. ಅವು ಉದುರಿ ಕಾಂಡದ ಮೇಲೆ ಕಲೆಗಳನ್ನು ಉಳಿಸುತ್ತದೆ. ಎಲೆಯು ಭರ್ಜಿಯಾಕಾರದಲ್ಲಿ ಒರಟಾಗಿರುತ್ತದೆ. ಎಲೆಯ ಮೇಲ್ಭಾಗ ದಟ್ಟ ಹಸುರು ಬಣ್ಣದ್ದಾಗಿರುತ್ತದೆ. ಕೆಳಭಾಗ ತಿಳಿಹಸುರು ಬಣ್ಣದಿಂದ ಕೂಡಿರುತ್ತದೆ. ಎಲೆಯ ಅಂಚು ನಯವಾಗಿದ್ದು ತುದಿ ಚೂಪಾಗಿರುತ್ತದೆ. ಇದರ ಒಂದೊಂದು ಹೂವಿನಿಂದಲೂ ಅವಳಿ ಕಾಯಿಗಳು ಹುಟ್ಟಿಕೊಳ್ಳುತ್ತವೆ. ಕಣಗಿಲೆಯಲ್ಲಿ ನಿರಿಯೋಡರಿನ್ ಎಂಬ ಶಕ್ತಿಯುತವಾದ ದ್ರವ್ಯವಿದೆ. ಗಿಡದ ಎಲ್ಲ ಭಾಗಗಳು ವಿಷಕಾರಕ, ಗಿಡದ ಬೇರು ಮತ್ತು ಬೇರಿನ ತೊಗಟೆ ಮೂತ್ರಲವಾಗಿರುತ್ತದೆ. ತೊಗಟೆಯಲ್ಲಿರುವ ಓಲಿಯಾಂಡ್ರಿನ್ ಅನ್ನು ಚುಚ್ಚುಮದ್ದಿನ ರೂಪದಲ್ಲಿ ನೀಡಿದಾಗ ಹೃದಯದ ಬಡಿತವು 7.5 ಇದ್ದುದ್ದು 10 ಕ್ಕೆ ಇಳಿಯಬಹುದು. ಹಾಗೆಯೇ ಮುಂದುವರಿದಲ್ಲಿ ಹೃದಯಸ್ತಂಭನವಾಗಬಹುದು.

ಬಿಳಿ ಮತ್ತು ಕೆಂಪು ಬಣ್ಣದ ಕಣಗಿಲೆಯ ತಾಜಾ ಬೇರು ಮಾತ್ರವಲ್ಲ ಎಲೆ, ತೊಗಟೆ, ಹೂಗಳು ಕೂಡ ವಿಷಯುಕ್ತ ತೊಗಟೆಯನ್ನು ಯಾವುದೇ ಕಾರಣದಿಂದ ತಿನ್ನಬಾರದು. ಇದನ್ನು ಬಾಹ್ಯ ಉಪಯೋಗಕ್ಕೆ ಮಾತ್ರ ಬಳಸಬೇಕು.

**ಔಷಧೀಯ ಗುಣಗಳು**

□ ಕಣಗಿಲೆಯ ತೊಗಟೆಯ ಕಷಾಯ ತಯಾರಿಸಿ, ಅದಕ್ಕೆ ಸಮಪ್ರಮಾನದ ಸಾಸಿವೆ ಎಣ್ಣೆ ಬೆರೆಸಿ ತೈಲ ತಯಾರಿಸಿ, ಕುಷ್ಠರೋಗಿಗಳ ಗಾಯಗಳಿಗೆ ಲೇಪಿಸಬೇಕು.



□ ಎಲೆಯ ರಸಕ್ಕೆ ಸಾಸಿವೆ ಎಣ್ಣೆ ಸೇರಿಸಿ ಕಾಯಿಸಿ ತಯಾ ರಿಸಿದ ತೈಲವನ್ನು ಲೇಪಿ ಸಿದರೆ ಕಜ್ಜಿಂಯು ಬಾಧೆಗೆ ಉಪಶಮನ.

□ ಮೂಲ ವ್ಯಾಧಿಯಿಂದ ಬಳಲುವವರು ಕಣಗಿಲೆಯ ಬೇರನ್ನು ನೀರಿನಲ್ಲಿ ಅರೆದು ಲೇಪಿಸುವುದ ರಿಂದ ನೋವು ಮತ್ತು ಬಾವು ಕಡಿಮೆಯಾಗುತ್ತದೆ.

□ ಕಣಗಿಲೆ ಎಲೆಯುನ್ನು ಅರೆದು ಲೇಪಿಸುವುದರಿಂದ ಹುಳುಕಡ್ಡಿ ವಾಸಿಯಾಗುತ್ತದೆ.

□ ಉಗುರುಸುತ್ತು ಉಂಟಾದಾಗ ಕಣಗಿಲೆಯ ಎಲೆ, ಎಣ್ಣೆ ಮತ್ತು ಸುಣ್ಣ ಇವುಗಳನ್ನ ಸೇರಿಸಿ ಅರೆದು ಕಟ್ಟಬೇಕು.

□ ಕಣಗಿಲೆಯ ಎಲೆಯನ್ನು ಬಾಣಲೆಯಲ್ಲಿ ಹಾಕಿ ಹುರಿದು, ಕರಕುಮಾಡಿ, ಅದನ್ನು ಒಂದು ಅಗಲವಾದ ತಟ್ಟೆಗೆ ಹಾಕಿ, ತಕ್ಕಷ್ಟು ನಿಂಬೆಹಣ್ಣಿನ ರಸ ಹಾಕಿ, ಚೆನ್ನಾಗಿ ಉಜ್ಜಿ ಮುಲಾಮು ಮಾಡಿ, ನರೂಲಿ (ಚರ್ಮದ ಮೇಲಿನ ಸಣ್ಣಗಂಟು □ ವಾರ್ಟ್) ಇರುವ ಜಾಗದಲ್ಲಿ ಪ್ರತಿದಿನ ಉಜ್ಜಿಕೊಂಡರೆ ಕ್ರಮೇಣ ಮಾಯವಾಗುತ್ತದೆ.

□ ತಲೆನೋವಿನಿಂದ ಬಳಲುವವರು ಕಣಗಿಲೆಯ ಬೇರಿನ ಪುಡಿಯನ್ನು ಹಣೆಗೆ ಹಚ್ಚಿ ಉಜ್ಜಿಕೊಂಡರೆ ನೋವು ಶಮನವಾಗುತ್ತದೆ.

□ ಜ್ವರದ ತಾಪ ಅತಿಯಾಗಿರುವಾಗ ಕಣಗಿಲೆಯ ಬೇರಿನ ತುಂಡನ್ನು ದಾರದಲ್ಲಿ ಕಟ್ಟಿ ಕುತ್ತಿಗೆಗೆ ಹಾಕುತ್ತಾರೆ. ಇದರಿಂದ ಜ್ವರದ ತಾಪ ಕಡಿಮೆಯಾಗುತ್ತದೆಂಬ ನಂಬಿಕೆಯಿದೆ.

□ ಹಾವು ಕಚ್ಚಿದಲ್ಲಿ ಬಿಳಿ ಕಣಗಿಲೆ ಹೂವುಗಳನ್ನು ಒಣಗಿಸಿ ಪುಡಿಮಾಡಿ, ಅಷ್ಟೇ ಪ್ರಮಾಣದ ತಂಬಾಕಿನ ಪುಡಿಮಾಡಿಯೊಂದಿಗೆ ಬೆರೆಸಿ, ಸ್ವಲ್ಪ ಏಲಕ್ಕಿಪುಡಿ ಸೇರಿಸಿ, ನುಣ್ಣಗಿನ ಪುಡಿ ಮಾಡಿ ನಸ್ಯ ಮಾಡಿಸಬೇಕು. – **ಶ್ರೀ ಸುಬ್ರಹ್ಮಣ್ಯಭಟ್**

## ನನ್ನ ಮಾತು





### ಮತದಾರರ ಫಲಿತಾಂಶ

ಕರ್ನಾಟಕ ರಾಜ್ಯದ ವಿಧಾನಸಭಾ 2018ರ ಚುನಾವಣೆ ಫಲಿತಾಂಶ ಬಂದು ನೂತನ ಸರ್ಕಾರವು ಸಹ ಅಸ್ತಿತ್ವಕ್ಕೆ ಬಂದಿರುತ್ತದೆ. ಇದರ ಬಗ್ಗೆ ಕಳೆದ ಮೂರು ತಿಂಗಳಿಂದ ಜನರ ಅಭಿಪ್ರಾಯ ಹಾಗೂ ಹೊಸ ಬಜೆಟ್ ಮಂಡಿಸುವ ಬಗ್ಗೆ ಅಭಿಪ್ರಾಯವೇನೆಂಬುದು ಈ ರೀತಿ ಇದೆ.

ತೆನೆ ಹೊತ್ತ ಮಹಿಳೆ ಕೈಯಿಂದ ಕಮಲವನ್ನು ತೆಗೆದುಕೊಂಡು ದೇವರನ್ನು ಪೂಜಿಸಿದರೆ ಒಳ್ಳೆಯದೆಂದು ಎಲ್ಲರ ಅಭಿಪ್ರಾಯ. ಅಂದರೆ ಈ ಮೂರು ಸಹ ಮಹಿಳೆಗೆ ಸಂಬಂಧಪಟ್ಟಂತೆ ಇದ್ದು ಒಟ್ಟು 224 ವಿಧಾನಸಭಾ ಸದಸ್ಯರಲ್ಲಿ ಕೇವಲ 8 ಮಂದಿ ಮಾತ್ರ ಮಹಿಳಾ ವಿಧಾನಸಭಾ ಸದಸ್ಯರಿರುತ್ತಾರೆ. ಇದು ಸರಿಯೇ? ಎಲ್ಲದಕ್ಕೂ ಮಹಿಳೆ ಸಮಪಾಲು ಎಂದು ಹೇಳುವುದು ಎಷ್ಟು ಸರಿ? ಆದರೂ ಸುಮಾರು ಶೇ. 50ರಷ್ಟು ಮತದಾನ ಮಹಿಳೆಯರಿಂದಲೇ ಬಂದಿಲ್ಲವೆ?

ಆದ್ದರಿಂದ ರಾಜ್ಯದ ಎಲ್ಲಾ ವರ್ಗದ ಮಹಿಳೆಯರಿಗೆ ಈಗ ಸರ್ಕಾರ ಏನು ಮಾಡುವಿರಿ? ನೀವುಗಳು ರಾಜಕೀಯವನ್ನು ಹೇಗಾದರೂ, ಏನಾದರೂ ಮಾಡಿಕೊಳ್ಳಿ. ಆದರೆ ಪ್ರತಿ ಮಹಿಳೆ ತನ್ನ ಸಂಸಾರಕ್ಕೆ ಪ್ರತಿ ತಿಂಗಳು ಖರ್ಚು ಮಾಡುವ ಹಣದಲ್ಲಿ ಎಷ್ಟು ಹಣ ಉಳಿಯುತ್ತದೆ ಎಂಬುದನ್ನು ನಿಮ್ಮ ಮಂಡಿಸಲಿರುವ ಬಜೆಟ್‌ನಲ್ಲಿ ಅನುಕೂಲ ಮಾಡುವಿರಾ? ಮಹಿಳೆಯರಿಗಾಗಿ ಎಲ್ಲಾ ಯೋಜನೆಗಳನ್ನು ಚಾಚೂತಪ್ಪದೆ ಪ್ರತಿಯೊಬ್ಬರಿಗೂ ತಲುಪುವಂತೆ ನೋಡಿಕೊಳ್ಳುವಿರಾ? ಎಂಬುದು ಸಾಮಾನ್ಯ ಜನರ ಅಭಿಪ್ರಾಯವಾಗಿದೆ.

ಒಟ್ಟಿನಲ್ಲಿ ಜಂಟಿ ಸರ್ಕಾರ ಅಸ್ತಿತ್ವದಲ್ಲಿರುವುದರಿಂದ ಸಾಲ ಮನ್ನಾ ಮಾಡುವ ವಿಚಾರದಲ್ಲಿ ರಾಜಕೀಯದ ಕುಟುಂಬದವರಿಂದಲೂ ಹಾಗೂ ಶ್ರೀಮಂತ ವರ್ಗದವರಿಂದಲೂ ಮತ್ತು ಸರ್ಕಾರಿ ನೌಕರರಿಂದಲೂ ದೇಣಿಗೆ ಪಡೆದು ಸಾಲ ಮನ್ನಾ ಮಾಡಲು ಸೂಕ್ತವೆಂದು ಕಟ್ಟೆ ಮೇಲೆ ಕುಳಿತು ಮಾತಾಡುವವರ ಅಭಿಪ್ರಾಯವಾಗಿದೆ.

ಸಂಪಾದಕ
**ಹೆಚ್.ವಿ. ಸುಬ್ಬರಾವ್**
ನಿವೃತ್ತ ಸಾ.ಶಿ.ಇ. ನೌಕರ


## ಮಹಿಳಾ ವಿಶೇಷ
**ಕನ್ನಡ ತಿಂಗಳ ಪತ್ರಿಕೆ**
**ಜುಲೈ 1 ರಿಂದ 31–2018**
**ಸಂಪುಟ 3, ಸಂಚಿಕೆ 11,**
**ಪುಟ 16 ಬೆಲೆ ರೂ.: 10**

**MAHILA VISHESHA**
**KANNADA MONTHLY**
**July 1 to 31 -2018**
Vol : 3 **Issue : 11 Pages : 16**
**Price : Rs.10/-**

ಮುಖಪುಟ :
ಬನಶಂಕರಿದೇವಿ ದೇವಸ್ಥಾನ, ಬೆಂಗಳೂರು

ಗೌರವ ಸಂಪಾದಕರು :
ಶ್ರೀಮತಿ ಸತ್ಯಭಾಮಾ ದಾಸ್
ಶ್ರೀಮತಿ ಗೀತಾ ರಾವ್

ಸಂಪಾದಕರು :
ಹೆಚ್.ವಿ.ವೆಂಕಟಸುಬ್ಬರಾವ್
ಮೊಬೈಲ್ 9243584444

ಉಪಸಂಪಾದಕರು :
ಎಸ್.ವೆಂಟಕರವಣಪ್ಪ
ಎಂ.ಆರ್. ಜಯಪ್ರಕಾಶ ನಾರಾಯಣ
ಭಾಸ್ಕರ್ ಹೆಚ್.ವಿ.
ಮೂರ್ತಿ ಜಿ.ಎನ್.

ಕಚೇರಿ ವಿಳಾಸ :
**ಮಹಿಳಾ ವಿಶೇಷ**
ನಂ. 136, ಶ್ರೀ ನೀಲಕಂಠಸ್ವಾಮಿ ಮಠ,
ಗನ್‌ಹೌಸ್ ಎದುರು, ಖಿಲ್ಲೆ ಮೊಹಲ್ಲಾ,
ಮೈಸೂರು – 570004

E-mail:
mahilavishesha15@gamil.com
Web: www.mahilavishesha.in
Whatsapp No : 8880334444

# ಅಂದದ ಎನಾಮಲ್ ಪೈಂಟ್ ಬಳೆ



ಅರಶಿನ, ಕುಂಕುಮ, ಹೂವು, ಕನ್ನಡಿ, ಹಣ್ಣು ಹೀಗೆ ಮಂಗಲ ದ್ರವ್ಯಗಳು ಶುಭ ಸಂಕೇತ. ಹಾಗೆಯೇ ಹೆಂಗಳೆಯರು ಆಭರಣಗಳನ್ನು ಧರಿಸಿದ್ದರೆ ಮಂಗಳ, ಶುಭಕರ, ಆಭರಣ ಅಲಂಕಾರಕ್ಕಾಗಿ ಬಳಸಿದ್ದರೂ ನಾರಿಗೆ ಸ್ವರ್ಣ ಇದ್ದರೆ ಲಕ್ಷಣ ಭೂಷಣ. ಹೊಸತು. ಈಗಿನ ಕಾಲಕ್ಕೆ ತಕ್ಕಂತೆ ನಮ್ಮ ಆಭರಣವು ಇದ್ದರೆ ಅದನ್ನು ಧರಿಸಲು ಸಂತಸ ಖುಷಿ. ಎನಾಮೆಲ್ ಪೈಂಟ್ ಬಳೆ

**ಎನಾಮಲ್ ಕಲಶ ಬಳೆ**

ವಿನ್ಯಾಸಬೇಕು. ಬಣ್ಣ ಬಣ್ಣದ್ದಾಗಿರಬೇಕು. ಬಳೆಯಲ್ಲಿ ಕಲಶದ ವಿನ್ಯಾಶವನ್ನು ಅದ್ಭುತವಾಗಿ ಜೋಡಿಸಬೇಕು ಎಂದಾದಾಗ ಎಲ್ಲಿ ಎನಾಮಲ್ ಪೈಂಟ್ ಅನ್ನು ಬಳಸಿದಾಗ ಕಲಶ ಎದ್ದು ಕಾಣುತ್ತದೆ. ಆಭರಣದ ಅಂದ ಹೆಚ್ಚುತ್ತದೆ. ಇದರ ಒಳಗೆ ಚಿನ್ನ ತುಂಬಿರುವುದಿಲ್ಲ. ಆದ್ದರಿಂದ ಬಳೆ ಭಾರವಾಗುವುದಿಲ್ಲ. ಇದಕ್ಕೆ 27 ಗ್ರಾಂ ಸಾಕು. ಹಾಗೆಯೇ ಈ ಬಳೆಯಲ್ಲಿ ನವಿಲಿನ ಗರಿಯ ಅಂದವಾದ ವಿನ್ಯಾಸವಿದೆ ಅದು ಕೋಲ್ಕತ್ತಾ ವಿನ್ಯಾಸ.

**ಅಗಲದ ನವಿಲು ಬಳೆ**

ಬಳೆ ಒಂದೊಂದೇ ಹಾಕುವುದು ಹಲವರಿಗೆ ಪ್ರಿಯ, ಏಕೆಂದರೆ, ಶಬ್ದವಾಗದೆ ಸಾಂಪ್ರದಾಯಿಕ ಉಡುಗೆಗೂ, ಆಧುನಿಕ ಉಡುಗೆಗೂ ಹೊಂದಿಕೊಳ್ಳುತ್ತದೆ. ಹಗುರವೂ ಆಗಿದ್ದು ಕೇವಲ 14 ಗ್ರಾಂ ಸಾಕಾಗುತ್ತದೆ. ಮುತ್ತರಿ ವಿನ್ಯಾಸವಿದ್ದು ಹೊಳಪನ್ನು ಕಳೆದುಕೊಳ್ಳುವುದಿಲ್ಲ. ಅಲ್ಲದೆ ನವಿಲಿನ ಆಕಾರ ಬಳೆಯಲ್ಲಿರುತ್ತದೆ.

**ತಿರುಪಿನ ಪೈಪ್ ಕಡ**

ಕಡ ಅತ್ಯಂತ ಜನಪ್ರಿಯವಾದದ್ದು ಕೊಡಗಿನಲ್ಲಿ ಕೊಡಗು ಜನರ ಅತ್ಯಂತ ಪ್ರಿಯವಾದ ಆಭರಣ ಕಡ. ಇದರ ಒಳಗೆ ಜಾಗವಿದ್ದು ಪೈಪ್‌ನ ತರಹವೂ ಇರುತ್ತದೆ. ಚಿನ್ನ ತುಂಬಿದ್ದು ಗಟ್ಟಿಯಾಗಿ ಇರುತ್ತದೆ. ನಿತ್ಯ ಬಳಕಗೆ ಗಟ್ಟಿಯಾದ್ದು ಬಳಸಿ ಅಲಂಕಾರಕ್ಕೆ ಹೋಲೋ ಬಳಸಿದರೆ ಉತ್ತಮ.

ಮೂರು ಬಳೆಗಳ ಜೋಡಣೆಯ ಅಗಲದ ಬಳೆ ಈ ಬಳೆ ಹೇಗೆ ಭಿನ್ನವಾಗಿದೆ ಅಂದರೆ ಒಂದೇ ಬಳೆ ಇದ್ದಂತೆ ಕಾಣುತ್ತದೆ. ಹಾಕಲು ಸುಲಭ. ಕಪ್ಪು ಎನಾಮಲ್ ಪೈಂಟ್. ಮಧ್ಯದ ಬಳೆಯ ಜಾಗದಲ್ಲಿ ಕೆಂಪು ಮತ್ತು ಬೆಳ್ಳಿಯ ಬಣ್ಣ ಹೀಗೆ ವಿಭಿನ್ನವಾದ ಫಿಲಿಗ್ರಿ ವಿನ್ಯಾಸದ ಸುಂದರ ಬಳೆ ಇದು. ವರ್ಷಗಳಾದರೂ ತನ್ನ ಅಂದವನ್ನು ಉಳಿಸಿಕೊಳ್ಳುತ್ತದೆ.

**ಪೆನ್ಸಿಲ್ ಎನಾಮಲ್ ಮಿರರ್ (ಕನ್ನಡಿ) ಫಿನಿಶ್ ಬಳೆ**

ಇದನ್ನು ತುಂಬ ಜಾಗರೂಕತೆಯಿಂದ ಬಳಸಬೇಕು. ಏಕೆಂದರೆ ಸ್ನಾನ ಮಾಡುವಾಗ ಧರಿಸಿದರೆ ಇದರ ಬಣ್ಣ ಮಾಸಿಹೋಗುತ್ತದೆ. ಕನ್ನಡಿ ತನ್ನ ಹೊಳಪನ್ನು ಕಳೆದುಕೊಳ್ಳುತ್ತದೆ. ಅಲ್ಲದೆ ಓರೆ ಕೋರೆ ವಿನ್ಯಾಸವಾದುದರಿಂದ ಕೊಳೆ ನಿಂತುಕೊಳ್ಳುವ ಸಂಭವ ಹೆಚ್ಚು. ಈ ವಿನ್ಯಾಸಕ್ಕೆ 12 ಗ್ರಾಂ ಬೇಕು. ಬಳೆಯ ಒಳಗೆ ಹೊಳಪು ಆದ್ದರಿಂದ ರಾತ್ರಿಯ ವೇಳೆ ಸಮಾರಂಭಗಳಿಗೆ ಹೋಗುವಾಗ ಧರಿಸಿಕೊಳ್ಳಲು ಅತ್ಯಂತ ಸೂಕ್ತವಾದುದು.

**ಆಭರಣದ ಜಾಗರೂಕತೆ ಹೇಗೆ?**

- ಬಳೆ ಖರೀದಿಸುವಾಗ ನಿಮ್ಮ ಕೈ ಅಳತೆಗಿಂತ ಸ್ವಲ್ಪ ದೊಡ್ಡದಾದ ಬಳೆ ಖರೀದಿಸಿ
- ಹರಳು ಪೋಣಿಸಿದ್ದು ಕೈಗೆ ಚಿಕ್ಕ ಬಳೆಯಾದರೆ ಹಾಕುವಾಗ ಉದುರಿ ಹೋಗುವ ಸಂಭವವಿದೆ.
- ಕೈಗೆ ಒಪ್ಪವಾಗಿ ಚಿಕ್ಕದಾಗಿಯೂ ಇರಬೇಕೆಂದು ಬಯಸುವವರು ತಿರುಪಿನ ಬಳೆ ಹರಳಿಲ್ಲದ ಬಳೆಯನ್ನು ಆಯ್ಕೆ ಮಾಡಬಹುದು.
- ಬಳೆಯ ಒಳಗೆ ರಬ್ಬರ್ ಬಳೆಯನ್ನು ಅಳವಡಿಸಿ ಬಳಸಿದಾಗ ಬಳೆ ಓರೆಕೋರೆಯಾಗುವುದಿಲ್ಲ.
- ಚಿನ್ನದ ಅಂಗಡಿಗೆ ಹೋದಾಗ ಹಳೆ ಬಳೆಗಳನ್ನು ತೆಗೆದುಕೊಂಡು ಹೋಗಿ, ಬಳೆಯನ್ನು ಉರುಟಾಗಿ ಮಾಡಿಕೊಳ್ಳುವ ಸಾಧನದಲ್ಲಿ ಉರುಟಾಗಿ ಮಾಡಿಸಿದರೆ ಹಲವಾರು ವರ್ಷ ಬಳೆಯನ್ನು ಹಾಗೆಯೇ ಕಾಪಾಡಿಕೊಳ್ಳಬಹುದು.
- ಒಂದೊಂದೇ ಬಳೆಯನ್ನು ಕೈಗೆ ಹಾಕಿಕೊಳ್ಳಬೇಕು. 2 ಬಳೆಯನ್ನು ಒಟ್ಟಾಗಿ ಕೈಗೆ ತುರುಕಿಸಬಾರದು.
- ಆದಷ್ಟು ಕೈಯನ್ನು ಗೋಡೆಯ ಬದಿಗೆ ಒರಗಿಸಿ ನಿತ್ತುಕೊಳ್ಳಬಾರದು.
- ಸೀರೆ ಬಟ್ಟೆಗೆ ಆದಷ್ಟು ಬಳೆ ಸಿಕ್ಕಿ ಹಾಕಿಕೊಳ್ಳದಂತೆ ಜಾಗರೂಕತೆ ಮಾಡಿಕೊಳ್ಳಬೇಕು.
- ಇತರ ಬಳೆಗಳೊಂದಿಗೆ ಹಾಕುವುದಾದರೆ ಹೊರ ಬದಿಗೆ ಹಾಕಿಕೊಂಡರೆ ಉತ್ತಮ.
- ಆದಷ್ಟು ಎಲ್ಲಾ ಬಳೆಗಳು ಒಂದೇ ಅಳತೆಯದ್ದನ್ನೇ ಒಟ್ಟಾಗಿ ಬಳಸಿದರೆ ಉತ್ತಮ. ಆಗ ಬಳೆಗಳ ಅಂದ ಹಾಗೆಯೇ ಇರುತ್ತದೆ. ಕೈಗೆ ಉಂಗುರಗಳನ್ನು ಬಳೆ ಧರಿಸಿದ ಮೇಲೆ ಧರಿಸಬೇಕು.

# ಚಿನ್ನದ ಹೂಡಿಕೆ ಲಾಭದಾಯಕ

ಜೀವನೋಪಾಯಕ್ಕೆ ಬಳಸಿ ಉಳಿದ ಹಣವನ್ನು ಉಳಿತಾಯ ಮಾಡಲು ಹಲವು ವಿಧಾನಗಳಿವೆ. ಭೂಮಿ ಖರೀದಿ, ವ್ಯಾಪಾರಕ್ಕೆ ಬಳಸುವುದು, ವಿದ್ಯೆಗೆ ಬಳಸುವುದು ಇತ್ಯಾದಿ. ಇವೆಲ್ಲಕ್ಕಿಂತ ಜಾಣ್ಮೆಯ ಮತ್ತು ಭವಿಷ್ಯತ್ತಿನಲ್ಲಿ ಆಪದ್ಬಾಂಧವ ಎಂದರೆ ಚಿನ್ನದಲ್ಲಿ ಹೂಡಿಕೆ.



ಹನಿಹನಿಗೂಡಿ ಹಳ್ಳ. ಇದು ಹಿರಿಯರು ಹೇಳಿದ ಮಾತು. ಈಗಿನ ಟ್ರೆಂಡ್ ಹೇಗಿದೆ ಎಂದರೆ ಜೀವನೋಪಾಯಕ್ಕೆ ಬಳಸಿ ಉಳಿದ ಹಣವನ್ನು ಏನು ಮಾಡುವುದು ಎಂದು ಯೋಚಿಸುವಾಗ ಮಾಡಬೇಕಾದ ವಿಧಾನವೆಂದರೆ ಭೂಮಿ (ಜಾಗ) ತೆಗೆದು ಇಡು, ವಿದ್ಯೆಗೆ ಬಳಸು, ಜಾಗರೂಕತೆಯಿಂದ ವ್ಯಾಪಾರಕ್ಕೆ ಬಳಸು, ಚಿನ್ನದ ರೂಪದಲ್ಲಿ ಹೂಡಿಡು ಇತ್ಯಾದಿ. ಎಲ್ಲಕ್ಕಿಂತ ಜಾಣ್ಮೆಯ ಮತ್ತು ಭವಿಷ್ಯದಲ್ಲಿ ಆಪದ್ಬಾಂಧವ ಎಂದರೆ ಚಿನ್ನದಲ್ಲಿ ಹೂಡಿಕೆ.

ಇದೆಷ್ಟು ಸತ್ಯ ಎಂದು 30 ವರುಷ ಹಿಂದೆ ಇದರಲ್ಲಿ ಬಂಡವಾಳವನ್ನು ಹಾಕಿದವರಲ್ಲಿ ಕೇಳಿದರೆ ತಿಳಿಯುತ್ತದೆ. ಹಲವಾರು ಮಹಿಳೆಯರು ಅತ್ಯಂತ ಸಂತಸದಿಂದ ತಿಳಿಸುವುದೇನೆಂದರೆ ನನ್ನ ಮದುವೆಯ ಕಾಲದಲ್ಲಿ ಹಿಂದೆ ಒಂದು ಗ್ರಾಮ್ ಚಿನ್ನಕ್ಕೆ 300 ರೂಪಾಯಿ ಇತ್ತು. ಈಗ ಗ್ರಾಮ್‌ಗೆ 3100 ರೂಪಾಯಿ ಆಗಿದೆ. 20–30 ವರುಷದಲ್ಲಿ ಇಂತಹ ಬಡ್ಡಿ ಎಲ್ಲಿ ದೊರಕುವುದು. ಆದ್ದರಿಂದ ಚಿನ್ನದಲ್ಲಿ ಹೂಡಿಕೆ ಮಾಡಿದರೆ ಖಂಡಿತ ಅದರಲ್ಲಿ ನಷ್ಟವಿಲ್ಲ.

ಹೂಡಿಕೆಗಾಗಿ ನಾವು ಚಿನ್ನವನ್ನು ಖರೀದಿಸುವುದಿದ್ದರೆ ವೇಸ್ಟೇಜ್, ಮೇಕಿಂಗ್ ಚಾರ್ಜ್ ಇಲ್ಲ ಗಟ್ಟಿ ಚಿನ್ನವನ್ನು ಖರೀದಿಸಿ ಇಡುವುದು ಉತ್ತಮ. ಅಲ್ಲದೆ ಚಿನ್ನದ ಕಾಯಿನ್, ಬಿಸ್ಕತ್‌ಗಳನ್ನೂ ಖರೀದಿಸಿ ಇಟ್ಟುಕೊಳ್ಳಬಹುದು. ಆದರೆ ಈ ಚಿನ್ನ ನಮಗೆ ಆಭರಣವಾಗಿ ಧರಿಸಲು ಸುಲಭವಾಗಿ ಸಿಗುವುದಿಲ್ಲ.

**ಚಿನ್ನದ ಶೇಖರಣೆಯಿಂದ ಲಾಭ**

1. ಸ್ಥಳ ಕಡಿಮೆ ಸಾಕು
2. ಕೂಡಲೇ ವಿಕ್ರಯಿಸಲು ಸಾಧ್ಯ
3. ಆಭರಣವಾಗಿ ಪರಿವರ್ತಿಸಬಹುದು
4. ಹಣವಾಗಿ ಪರಿವರ್ತಿಸಬಹುದು
5. ಆತ್ಮ ತೃಪ್ತಿ, ಆತ್ಮ ವಿಶ್ವಾಸ

**ಚಿನ್ನದ ಖರೀದಿಯ ಸಮಯ ಹೇಗಿರಬೇಕು?**

* ಗ್ರಾಹಕರು ದಾಹದಿಂದಿರಬಾರದು, ಸೇಲ್ಸ್ ಮಾಡುವವರು ಖುಷಿಯಿಂದಿದ್ದು ಚಿನ್ನದ ಆಭರಣಗಳ ಸೂಕ್ಷ್ಮಗಳನ್ನು ತಿಳಿಸಿ ಹೇಳುವಂತಿದ್ದರೆ ಚೆನ್ನ.

* ಮಕ್ಕಳು ಗಲಾಟೆ ಮಾಡುತ್ತಿದ್ದರೆ ಗ್ರಾಹಕರಿಗೆ ಆಭರಣ ಖರೀದಿಸಲು ತಾಳ್ಮೆಯಿರುವುದಿಲ್ಲ. ಆದ್ದರಿಂದ ಏನಾದರೂ ಆಟಿಕೆ, ಬಲೂನ್, ಮಿಠಾಯಿ ಮುಂತಾದವುಗಳನ್ನು ಕೇಳಿ ಪಡೆಯಬಹುದು.

* ಗ್ರಾಹಕರು ತಮಗೆ ಬೇಕಾದ ಎಲ್ಲಾ ಆಭರಣಗಳನ್ನು ಯಾವುದೇ ಭಯ ಇಲ್ಲದೆ ಧೈರ್ಯವಾಗಿ ಪ್ರೀತಿಯಿಂದ ಕೇಳಿ ನೋಡಬಹುದು. ಸೇಲ್ಸ್‌ಮೆನ್‌ಗಳಲ್ಲಿ ತಮಗೆ ಗೊತ್ತಾಗದ ಅಥವಾ ತಿಳಿಯಬೇಕಾದ ವಿಷಯಗಳನ್ನು ನೇರವಾಗಿ ಕೇಳಿ ತಿಳಿದುಕೊಳ್ಳಬೇಕು. ಆದರೆ ಕಲ್ಲಿನ ಹೆಸರು, ಹವಳದ ಬೆಲೆ ಈ ತಹರ ಬೆಲೆಗಳನ್ನು ತಾವೇ ಕುಳಿತು ಲೆಕ್ಕ ಹಾಕಿ ಮೊತ್ತ ಕಂಡುಹಿಡಿದು ಖರೀದಿಸಬೇಕು. ಇದರಿಂದ ಒಂದು ವೇಳೆ ಸೇಲ್ಸ್‌ಮೆನ್‌ಗಳಿಗೆ ತಪ್ಪಿ ಹೋದರೂ ತಿದ್ದಿ ಸರಿಪಡಿಸಿಕೊಳ್ಳಬಹುದು.

**ಮಾಹಿತಿ ನೀಡುವಿಕೆ:** ಇದು ಅಂಗಡಿಯಿಂದ ಆಭರಣ ಖರೀದಿ ಮಾಡಲು ಬರುವ ಮುನ್ನ ಅದೇ ಅಂಗಡಿಯಿಂದ ಖರೀದಿ ಮಾಡಿದ ಗ್ರಾಹಕರಲ್ಲಿ ಆಭರಣ ಹೇಗಿದೆ ಎಂದು ಅವರ ಅನುಭವವನ್ನು ವಿಚಾರಿಸಿ ಖರೀದಿ ಮಾಡಬೇಕು. ಅಲ್ಲದಿದ್ದರೆ ಒಂದೆರಡು ವಾರ ಅಥವಾ ತಿಂಗಳಲ್ಲಿ ವಿನಾಕಾರಣ ಹಾಳಾದರೆ ಸರಿಮಾಡಿ ಕೊಡುವಂತಹ ಉತ್ತಮ ರೀತಿಯಲ್ಲಿ ಸೇವೆ ಸಲ್ಲಿಸುವಲ್ಲಿಂದ ಖರೀದಿಸಬೇಕು.

ಒಳ್ಳೆಯ ಹೆಸರು ಹೊಂದಿರುವ ಅಂಗಡಿಯಿಂದಲೇ ಖರೀದಿಸಿದರೆ ಉತ್ತಮ. ಅದೇ ರೀತಿ ಹಳೆಯ ಆಭರಣವನ್ನು ಕೂಡ ಚಿನ್ನದ ಪ್ರಮಾಣ ಎಷ್ಟಿದೆ ಎಂದು ಗೋಲ್ಡ್ ಟೆಸ್ಟಿಂಗ್ ಮಿಶನ್‌ನಲ್ಲಿ ಪರೀಕ್ಷೆ ಮಾಡಿ ಹಣವನ್ನು ಪಡೆಯಬಹುದು.

ಚಿನ್ನ ಖರೀದಿ ಮಾಡಿದ ನಂತರ ಇತರರಿಗೆ ಕಾಣುವಂತಿರುವ ಅದೇ ಪೆಟ್ಟಿಗೆ ಅಥವಾ ಅಂಗಡಿ ಹೆಸರಿನ ಚೀಲವನ್ನು ಉಪಯೋಗಿಸುವುದರ ಬದಲು ತಮ್ಮ ಚೀಲದ ಒಳಗೆ ಹಾಕಿಕೊಂಡೊಯ್ಯುವುದು ಭದ್ರತೆ ದೃಷ್ಟಿಯಿಂದ ಬಲು ಒಳ್ಳೆಯದು.

ಈಗಿನ ನಂಬರ್ ಲಾಕ್ ಪೆಟ್ಟಿಗೆ ಬಂದಿದೆ ಆದ್ದರಿಂದ ದೇವಸ್ಥಾನಗಳಲ್ಲಿ ಊಟದ ತಾಣಗಳಲ್ಲಿ, ಚಿನ್ನವನ್ನು ನಂಬರ್ ಲಾಕ್ ಪೆಟ್ಟಿಯಲ್ಲಿಟ್ಟರೆ ಸೂಟ್‌ಕೇಸ್‌ನ್ನು ಓಪನ್ ಮಾಡಿದರೂ ಚಿನ್ನದ ಪೆಟ್ಟಿಗೆಯ ನಂಬರ್ ಅಷ್ಟು ಸುಲಭದಲ್ಲಿ ಸಿಗದ ಕಾರಣ ರಕ್ಷಣೆ ಇರುತ್ತದೆ.

ಚಿನ್ನ ಖರೀದಿಸುವವರಲ್ಲಿ ಮೂರು ವಿಧದವರು ಇರುತ್ತಾರೆ. ಹೂಡಿಕೆ ಮತ್ತು ಅಲಂಕಾರ ಮಾಡಲು, ಹೂಡಿಕೆಗಾಗಿ ಮಾತ್ರ ಮತ್ತು ಅಲಂಕಾರಕ್ಕಾಗಿ ಮಾತ್ರ ಕೊಳ್ಳುವವರು.

ಮೊದಲು ಗ್ರಾಹಕರು ತಾನು ಯಾವುದರ ಆಧಾರದ ಮೇಲೆ ಖರೀದಿಸುತ್ತಿದ್ದೇನೆ ಎಂದು ನಿರ್ಧರಿಸಬೇಕು. ಗ್ರಾಹಕರು ಖರೀದಿಸಿದ 916 ಚಿನ್ನ ಆಭರಣಗಳನ್ನು ಮಾರಾಟ ಮಾಡುವಾಗ ತೇಮಾನ್ ಮತ್ತು ಮಜೂರಿಯನ್ನು ಹೊರತುಪಡಿಸಿ ತೂಕಕ್ಕೆ ಆ ದಿನದ ಧಾರಣೆಯಲ್ಲಿ ಹಣ ನೀಡುವುದು ಪರಿಪಾಠ ಹೆಚ್ಚಿನ ಆಭರಣದ ವರ್ತಕರಲ್ಲಿ ಕಂಡುಬರುತ್ತದೆ. ಒಟ್ಟಿನಲ್ಲಿ ಜೀವನದ ಆಧಾರವಾಗಿ ಚಿನ್ನ ಮಹತ್ತರದ ಪಾತ್ರವನ್ನು ವಹಿಸುತ್ತದೆ.

**–ಕೃಷ್ಣವೇಣಿ ಪ್ರಸಾದ್ ಮುಳಿಯ**

# ಕಾಯಿ ಹಣ್ಣಾಗುವುದು ಹೇಗೆ?

ಹೂ ಬಿಡುವ ಸಸ್ಯಗಳಲ್ಲಿ ಫಲವಂತವಾದ ಹೆಣ್ಣು ಹೂಗಳು ಹೀಚಾಗಿ ಕಾಯಾಗಿ ಕೊನೆಗೆ ರಸಭರಿತ ವರ್ಣಮಯ ಹಣ್ಣುಗಳಾಗುವ ನೈಸರ್ಗಿಕ ಕ್ರಿಯೆಯಲ್ಲಿ ನಾಲ್ಕು ವಿಭಿನ್ನ ವಿಶಿಷ್ಟ ಹಂತಗಳಿವೆ. ಈ ಕ್ರಿಯೆಯ ಮೊದಲ ಮೂರು ಹಂತಗಳಲ್ಲಿ 'ಆಕ್ಸಿನ್' ಎಂಬ ಒಂದು ವಿಶೇಷ ಸಸ್ಯ ಹಾರ್ಮೋನು ಮತ್ತು ಕಡೆಯ ಹಂತದಲ್ಲಿ 'ಪೆಕ್ಟಿನ್' ಎಂಬ ಮತ್ತೊಂದು ಸಸ್ಯ ಹಾರ್ಮೋನು ನಿರ್ಣಾಯಕ ಪಾತ್ರ ನಿರ್ವಹಿಸುತ್ತದೆ.

ಮೊದಲ ಹಂತದಲ್ಲಿ ಫಲವಂತವಾದ ಅಂಡಾಣು ರಭಸವಾಗಿ ವಿಭಜನೆಗೊಳ್ಳುತ್ತ ಕೆಲ ದಿನಗಳಲ್ಲೇ ಆಯಾ ಸಸ್ಯ ಪ್ರಭೇದದಲ್ಲೇ ನಿರ್ದಿಷ್ಟ ಗರಿಷ್ಠ ಸಂಖ್ಯೆ ಮುಟ್ಟುತ್ತದೆ. ಈ ಘಟ್ಟದ ನಂತರ ಜೀವಕೋಶಗಳ ಸಂಖ್ಯೆ ಒಂದೇ ಒಂದೂ ಹೆಚ್ಚುವುದಿಲ್ಲ. ಹೂವು 'ಹೀಚು' ಆಗುವ ಹಂತ ಇದು.

ಎರಡನೆಯ ಹಂತದಲ್ಲಿ ಹೀಚಿನ ಒಳಗಿನ ಪ್ರತಿಯೊಂದು ಜೀವಕೋಶವೂ ಒಬ್ಬ ತೊಡಗುತ್ತದೆ. ಅವುಗಳ ಒಳಗೆಲ್ಲ ಶರ್ಕರ ಪಿಷ್ಟಗಳು ಸಂಗ್ರಹವಾಗಿ ರುಚಿ–ರಸಗಳು ತುಂಬಿಕೊಳ್ಳುತ್ತವೆ. ಬೀಜಗಳು ಹುದುಗಿದ ಈ ತಿರುಳನ್ನು ಆವರಿಸಿದ ಸಿಪ್ಪೆ ದೃಢವಾಗುತ್ತದೆ. ಹೀಚು ಉಬ್ಬಿಕಾಯಿ ಆಗುವ ಹಂತ ಇದೆ.

ಮುಂದಿನ ಹಂತದಲ್ಲಿ ತಿರುಳಿನ ರುಚಿ–ರಸ ಸಂಗ್ರಹ ಹೆಚ್ಚುವುದರ ಜೊತೆಗೆ ಕಾಯಿಯ ಒಳಗಿನ ಬೀಜಗಳು ಪ್ರೌಢ ಹಂತವನ್ನೂ ಸಮೀಪಿಸುತ್ತವೆ. ತಿರುಳಿನ ಮತ್ತು ಸಿಪ್ಪೆಯ ಪ್ರತಿ ಜೀವಕೋಶದಲ್ಲೂ ಆಯಾ ಸಸ್ಯ ಪ್ರಭೇದ ವಿಶಿಷ್ಟ ವಾಸನೆ ಬೆರೆಯತೊಡಗುತ್ತದೆ. ಹಾಗಾದೊಡನೆ ಪೆಕ್ಟಿನ್ ಹಾರ್ಮೋನಿನ ಉತ್ಪಾದನೆ ಆರಂಭವಾಗಿ ಕೆಲ ದಿನಗಳಲ್ಲೇ ಗರಿಷ್ಠ ಮಟ್ಟ ಮುಟ್ಟುತ್ತದೆ. ಕಾಯಿ ಪೂರ್ಣ ಬಲಿತು ನಿಲ್ಲುತ್ತದೆ.

ಹಸಿರು ಬಣ್ಣದಲ್ಲೇ ಇದ್ದರೂ ಕಾಯಿ ಹೀಗೆ ಸಂಪೂರ್ಣ ಬಲಿತೊಡನೆ ಮಾಯೆಯೇ ಎಂಬಂತೆ ಪೆಕ್ಟಿನ್‌ನ ಉತ್ಪಾದನೆ ನಿಂತುಹೋಗುತ್ತದೆ. ಹಾಗಾದೊಡನೆ ಕಾಯಿಯ ಸಿಪ್ಪೆಯಲ್ಲಿನ ಹರಿತ್ತು ಕಡಿಮೆಯಾಗತೊಡಗುತ್ತದೆ. ಹಸಿರು ಹೊರತಾದ ಇತರ ಬಣ್ಣಗಳು ಸಿಪ್ಪೆಯಲ್ಲಿ ಮೂಡತೊಡಗುತ್ತವೆ. 'ಬಾಳೆಹಣ್ಣಿನ ಬಂಗಾರ ಹಳದಿ, ಸೇಬಿನ ಸುಂದರ ಕೆಂಪು, ಕಿತ್ತಳೆಯ ಕಿತ್ತಳೆ ವರ್ಣ ಇತ್ಯಾದಿ' ಜೊತೆ ಜೊತೆಗೇ ಕಾಯಿ ಸಂಪೂರ್ಣ ಪಕ್ವವಾಗಿ ರಸ–ರುಚಿ–ವಾಸನೆ–ವರ್ಣಭರಿತ ಹಣ್ಣು ಆಗುತ್ತದೆ.

ಹಣ್ಣುಗಳ ಪರಮೋದ್ದೇಶ ಬೀಜ ಪ್ರಸಾರ. ಎಂದರೆ ಸಂತಾನ ವರ್ಧನೆ. ಆ ಕಾರ್ಯಕ್ಕೆ ಒಪ್ಪವಾಗುವಂತೆ ಅದಕ್ಕೆ ನೆರವಾಗುವ ಪ್ರಾಣಿ ಪಕ್ಷಿಗಳಿಗೆ ಆಕರ್ಷಕವಾಗುವ ಬಣ್ಣಗಳನ್ನು ಪ್ರದರ್ಶಿಸಿ, ಇಷ್ಟವಾಗುವ ರಸ–ರುಚಿ–ವಾಸನೆಗಳ ತಿರುಳನ್ನು ಧರಿಸಿ ಹಣ್ಣುಗಳು ಅಂಥ ಜೀವಿಗಳನ್ನು ಸೆಳೆಯುತ್ತವೆ. ತನ್ಮೂಲಕ ಬೀಜ ಪ್ರಸಾರ ಕೈಗೂಡುತ್ತದೆ. ಎಂಥ ಅದ್ಭುತ ವ್ಯವಸ್ಥೆ!

**–ಎನ್. ವಾಸುದೇವ್**

# ಹೆಂಗಳೆಯರ ವಸ್ತ್ರ ಸಂಹಿತೆ



ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆ ವಸ್ತ್ರ ಸಂಹಿತೆ ಅನ್ವಯನಾಗುವುದಾದರೆ, ಆ ಗುಡಿಯಲ್ಲಿ ಕೆಲಸ ಮಾಡುವ ಅರ್ಚಕ ವರ್ಗಕ್ಕೂ ಇದು ಅನ್ವಯವಾಗಬೇಡವೆ? ಅರೆಬೆತ್ತಲೆಯಾಗಿ ಅವರು ಭಕ್ತಾದಿಗಳ ಮುಂದೆ (ಮಹಿಳೆಯರ ಮುಮದೆ ಕೂಡಾ) ಕಾಣಿಸಿಕೊಳ್ಳುವುದು ಯಾವ ಸಭ್ಯತೆ?

50 ವರ್ಷಗಳ ನಂತರ ಊಟದ ಪದ್ಧತಿಯನ್ನು ಬದಲಾಯಿಸಬೇಕು. 100 ವರ್ಷಗಳ ನಂತರ ಮನೆಯನ್ನು ಕೆಡವಬೇಕು. 500 ವರ್ಷಗಳ ನಂತರ ಮಂದಿರ–ಮಸೀದಿಗಳನ್ನು ಬೀಳಿಸಿಬಿಡಬೇಕು. 1000 ವರ್ಷಗಳ ನಂತರ ಧರ್ಮಕ್ಕೆ ಬೆಂಕಿ ಹಚ್ಚಬೇಕು. 50 ವರ್ಷಗಳಲ್ಲಿ ಊಟದ ಏಕತಾನತೆ ರುಚಿಯನ್ನು ಹದಗೆಡಿಸಿರುತ್ತದೆ. 100 ವರ್ಷಗಳಲ್ಲಿ ಮನೆಗಳ ವಾಸ್ತುಶಿಲ್ಪ ಹಳೆಯದಾಗಿ ತೋರುತ್ತದೆ. 500 ವರ್ಷಗಳಲ್ಲಿ ಮಂದಿರ–ಮಸೀದಿಗಳು ತಮ್ಮ ಮೂಲ ಉದ್ದೇಶಗಳನ್ನು ಮರೆತು ಬಿಡುತ್ತವೆ. 1000 ವರ್ಷಗಳಲ್ಲಿ ಧರ್ಮದಲ್ಲಿಯೂ (ರೂಢಿಗತವಾದ ಕಂದಾಚಾರಗಳಿಂದ) ಕೊಳೆ–ಗಲೀಜು ಸೇರಿಕೊಂಡು ಬಿಡುತ್ತದೆ. ಇಂದು ಪ್ರತಿಯೊಂದು ಧರ್ಮದ ಸ್ಥಿತಿಯೂ ಹೀಗೆಯೇ ಆಗಿರುವುದರಿಂದ ಅವು ಸಮಸ್ಯೆಗಳಿಗೆ ಸಮಾಧಾನ ನೀಡದಂತಾಗಿದೆ. ಮುತ್ತಿನಂಥ ಈ ಮಾತುಗಳನ್ನು ಆಡಿದವರು ಇನ್ನಾರೂ ಅಲ್ಲ, ಪ್ರಸಿದ್ಧ ಜೈನಮುನಿ ತರುಣ ಸಾಗರ ಅವರು.

ಬದಲಾವಣೆ ಜಗದ ನಿಯಮ, ಡಾರ್ವಿನ್ನನ ಪ್ರಖ್ಯಾತ ನಿಯಮ 'ಸರ್ವೈವಲ್ ಆಫ್ ದ ಫಿಟ್ಟೆಸ್ಟ್' ಹೇಳುವುದೂ ಇದನ್ನೇ ಜಗತ್ತಿನ ಯಾವ ಸಂಗತಿಯೇ ಆಗಲಿ, ಬದಲಾದ ಕಾಲದಲ್ಲೂ ಪ್ರಸ್ತುತವಾಗಿ ಉಳಿದುಕೊಳ್ಳಬೇಕಾದರೆ ಅದು ಫಿಟ್ ಆಗಬೇಕು; ಅರ್ಥಾತ್, ಕಾಲಕ್ಕೆ ಅನುಗುಣವಾಗಿ ತನ್ನನ್ನು ಬದಲಾಯಿಸಿಕೊಳ್ಳಬೇಕು. ಮುನಿಶ್ರೀ ತರುಣ ಸಾಗರರ ಹೇಳಿಕೆಯೂ ಇದನ್ನೇ ಸಮರ್ಥಿಸುತ್ತದೆ.

**ವಸ್ತ್ರ ಸಂಹಿತೆ!**

ಬದಲಾವಣೆ ಬೇಕು ಮಾತ್ರವಲ್ಲ, ಅದು ಪ್ರಗತಿಯೆಡೆಗೆ ಮುಖ ಮಾಡಿರಬೇಕು ಎನ್ನುವ ಹೊತ್ತಿನಲ್ಲಿಯೇ. ಅದು ಹಿಮ್ಮುಖವಾಗಿ ಚಲಿಸುವಂತಿರಬೇಕು ಎಂದು ಹಟ ಹಿಡಿಯುವವರ ಬಗ್ಗೆ ಏನನ್ನೋಣ? ಉದಾಹರಣೆಗೆ ಮಂಗಳೂರಿನ ಪ್ರಸಿದ್ಧ ದೇವಾಲಯವೊಂದರಲ್ಲಿ ಭಕ್ತರಿಗೆ ವಸ್ತ್ರ ಸಂಹಿತೆ ವಿಧಿಸಿರುವ ಬಗ್ಗೆ ಹಿಂದೆ ಪತ್ರಿಕೆಯೊಂದರಲ್ಲಿ ವರದಿಯಾಗಿತ್ತು. ಭಾರತೀಯ ಪರಂಪರೆಯಲ್ಲಿ ಬೆಳೆದು ಬಂದ ಸಾಂಪ್ರದಾಯಿಕ ಉಡುಪುಗಳು ಮತ್ತು ಅಶ್ಲೀಲ ಎನಿಸದ ಸಭ್ಯ ಉಡುಪುಗಳನ್ನು ಧರಿಸಿಕೊಂಡು ಭಕ್ತರು ದೇವಳಕ್ಕೆ ಬರಬಹುದು. ಫ್ಯಾಷನ್‌ನ ಹೆಸರಿನಲ್ಲಿ ಮೈಮಾಟ ಪ್ರದರ್ಶನಕ್ಕೆ ಅವಕಾಶವಾಗುವ ಯಾವುದೇ ಉಡುಪುಗಳನ್ನು ಮಹಿಳಾ ಮತ್ತು ಪುರುಷ ಭಕ್ತರು ಧರಿಸಿಕೊಂಡು ಬರಬಾರದು ಎಂಬುದು ಇಲ್ಲಿ ವಿಧಿಸಲಾಗಿರುವ ನಿರ್ಬಂಧ. ದೇವಸ್ಥಾನ ಧಾರ್ಮಿಕ ಕೇಂದ್ರವಾಗಬೇಕೇ ಹೊರತು, ಶಾಪಿಂಗ್ ಸೆಂಟರ್ ಅಥವಾ ಪ್ರವಾಸಿ ಕೇಂದ್ರವಾಗಬಾರದು. ದೇವಸ್ಥಾನಗಳಿಗೆ ಅದರದ್ದೇ ಆದ ಚೌಕಟ್ಟುಗಳಿವೆ. ಆಧುನಿಕತೆಯ ಗಾಳಿಯಲ್ಲಿ ದೇವಸ್ಥಾನ ವಠಾರ ಆ ಚೌಕಟ್ಟನ್ನು ಮೀರಿ ಹೋಗಬಾರದೆಂಬ ಉದ್ದೇಶದಿಂದ ಈ ನಿಯಮವನ್ನು ಜಾರಿ ಮಾಡಲಾಗಿದೆ ಎಂಬುದು ಈ ಬಗ್ಗೆ ದೇವಳದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನೀಡುವ ಸಮರ್ಥನೆ.

ಪ್ರಜಾತಾಂತ್ರಿಕವಾಗಿ ಆಯ್ಕೆಯಾಗುವ ಸರಕಾರವು ದೇಶದ ಸಂವಿಧಾನದ ಅನುಸಾರ ನಡೆದುಕೊಳ್ಳಲು ಕರ್ತವ್ಯಬದ್ಧವಾಗಿರುವಾಗ ಅದರ ಅಡಿಯಲ್ಲಿ ಬರುವ ದೇಗುಲದಲ್ಲಿ ವಿಧಿಸಲಾಗಿರುವ ಪ್ರಸ್ತುತ ನಿರ್ಬಂಧವು ಸಂವಿಧಾನ ರೀತಿಯ ಸಮ್ಮತವೇ? ಸಂವಿಧಾನದ ನಿಯಮಗಳಲ್ಲಿ ಯಾವುದು ಸಾರ್ವಜನಿಕ ಅಶ್ಲೀಲ ನಡವಳಿಕೆ (ಭಾರತೀಯ ದಂಡ ಸಂಹಿತೆಯ ಸೆಕ್ಷನ್ 294) ಎಂದು ಸ್ಪಷ್ಟಪಡಿ

ನೀ ಮಾತಾಡುವ ಮುನ್ನ...
ಕೇಳು
ನೀ ಬರೆಯುವ ಮುನ್ನ...
ಯೋಚಿಸು
ನೀ ಸೋಲುವ ಮುನ್ನ...
ಪ್ರಯತ್ನಿಸು
ಮತ್ತು
ನೀ ಸಾಯುವ ಮುನ್ನ...
ಬದುಕು!!



**–ಜೆಪಿ, ನಂಜನಗೂಡು**

ಸಿರುವಾಗ ಸದರಿ ನಿರ್ಬಂಧವು ಐಪಿಸಿಯ ಯಾವ ನಿಯಮದ ಅಡಿಯಲ್ಲಿ ಬರುತ್ತದೆ ಎಂಬುದನ್ನು ಆಡಳಿತಾಧಿಕಾರಿಗಳು ಸ್ಪಷ್ಟಪಡಿಸಬೇಕಾಗುತ್ತದೆ.

**ಮಹಿಳೆಯರೇ ಗುರಿ**

ಭಾರತೀಯ ಪರಂಪರೆಯಲ್ಲಿ ಬೆಳೆದುಬಂದ ಸಾಂಪ್ರದಾಯಿಕ ಉಡುಪುಗಳು ಎಂದರೆ ಯಾವುವು? ಆಧುನಿಕ ಪುರುಷರು ಧರಿಸುವ ಯಾವ ಉಡುಪು ಇವರು ಹೇಳುವ ಭಾರತೀಯ ಪರಂಪರೆಯಲ್ಲಿ ಬೆಳೆದುಬಂದ ಸಾಂಪ್ರದಾಯಿಕ ಉಡುಪುಗಳಲ್ಲ. ಪ್ಯಾಂಟ್ ಶರ್ಟುಗಳಿಂತೂ ಅಲ್ಲವೇ ಅಲ್ಲ. ಹಾಗಿರುವಾಗ ಪುರುಷರು ಯಾವ ಉಡುಪು ಧರಿಸಿಕೊಂಡು ಬರಬೇಕು? ಇನ್ನು, ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆ ವಸ್ತ್ರಸಂಹಿತೆ ಅನ್ವಯವಾಗುವುದಾದರೆ, ಆ ಗುಡಿಯಲ್ಲಿ ಕೆಲಸ ಮಾಡುವ ಅರ್ಚಕ ವರ್ಗಕ್ಕೂ ಇದು ಅನ್ವಯವಾಗಬೇಡವೇ? ಅರೆಬೆತ್ತಲೆಯಾಗಿ ಅವರು ಭಕ್ತಾದಿಗಳ ಮುಂದೆ (ಮಹಿಳೆಯರ ಮುಂದೆ ಕೂಡಾ) ಕಾಣಿಸಿಕೊಳ್ಳುವುದು ಯಾವ ಸಭ್ಯತೆ?

ವಸ್ತ್ರಸಂಹಿತೆ ಅದು ಶಿಕ್ಷಣ ಸಂಸ್ಥೆಗಳಲ್ಲಿರಲಿ ಅಥವಾ ದೇವಸ್ಥಾನಗಳಲ್ಲಿರಲಿ ಅದರ ಪ್ರಧಾನ ಗುರಿ ಸಹಜವಾಗಿಯೇ ಮಹಿಳೆಯರು (ಯಾಕೆಂದರೆ ಅದನ್ನು ನಿರ್ಧರಿಸುವವರು ಬಹುತೇಕ ಪುರುಷರು) ಇಂತಹ ಸಂಹಿತೆಗಳನ್ನು ವಿಧಿಸುವಾಗಲೆಲ್ಲ ಅವರು ಸಂಸ್ಕೃತಿಯನ್ನು ಉಲ್ಲೇಖಿಸುತ್ತಿರುತ್ತಾರೆ. ಆದರೆ ಸಂಸ್ಕೃತಿ ಎಂದರೇನು? ಅದು ಹೇಗಿರಬೇಕು? ಅದು ನಿಂತ ಕೊಳಚೆ ನೀರಿನಂತಿರಬೇಕೆ? ಅಥವಾ ಹರಿವ ಪರಿಶುದ್ಧ ನದಿಯಂತಿರಬೇಕೆ? ಕಾಲದೊಂದಿಗೆ ಸಂಸ್ಕೃತಿಯ ಅಂಗಗಳಾದ ಆಹಾರ, ಉಡುಪು, ಚಿಂತನೆ, ಜೀವನಶೈಲಿಗಳೂ ಬದಲಾಗುವುದು ಸಹಜ. ಉಡುಪನ್ನು ಧರಿಸುವ ಮೂಲ ಉದ್ದೇಶ ಎಲ್ಲಾ ಕಾಲದಲ್ಲೂ ಒಂದೇ ಆಗಿರುವುದಿಲ್ಲ. ಮಳೆ, ಚಳಿಯಿಂದ ರಕ್ಷಿಸಿಕೊಳ್ಳಲು ಸೊಪ್ಪು ಸುತ್ತಿಕೊಳ್ಳುವ ಆದಿಮಾನವ ಕಾಲದಿಂದ ಹಿಡಿದು ಸೌಂದರ್ಯ, ಅನುಕೂಲ ಸೇರಿದಂತೆ ಹಲವು ಉದ್ದೇಶಗಳಿಂದ ಉಡುಪು ಧರಿಸುವ ಆಧುನಿಕ ಕಾಲದವರೆಗೂ ಅದರ ಸ್ವರೂಪದ ಜತೆಗೆ ಉದ್ದೇಶವೂ ಬದಲಾಗುತ್ತಾ ಬಂದಿದೆ. ನಾಲ್ಕು ಗೋಡೆಯ ಒಳಗಡೆಯೇ ಇದ್ದ ಹೆಣ್ಣು ಇಂದು ಹೊರಗೆ ಬಂದು ದುಡಿಯುವಾಗ ಆಕೆ ಇಂದಿನ ದಿನಮಾನದ ಕೆಲಸಗಳಿಗೆ ಅನುಕೂಲವಾಗುವಂತಹ ಉಡುಪು ಧರಿಸಬೇಕಾಗುತ್ತದೆ. ಇಲ್ಲಿ ಸುರಕ್ಷತೆಯ ಜತೆಗೇ ಕಂಫರ್ಟ್ ಎನ್ನುವುದು ಬಹಳ ಮುಖ್ಯ. ಹಾಗಾಗಿಯೇ ಸಲ್ವಾರ್ ಕಮೀಜ್, ಚೂಡಿದಾರ, ಜೀನ್ಸ್, ನೈಟಿ (ಮನೆಯಲ್ಲಿ), ಮೊದಲಾದವು ಬಳಕೆಗೆ ಬಂದಿವೆ. ಅದು ಹೆಣ್ಣಿಗೆ ಅಪಾರ ಆತ್ಮವಿಶ್ವಾಸವನ್ನು ಭದ್ರತೆಯನ್ನು, ಚಲನೆಯ ಸ್ವಾತಂತ್ರ್ಯವನ್ನು ನೀಡಿದೆ. ಹಾಗಾಗಿ ಈ ಎಲ್ಲ ಉಡುಗೆಗಳೂ ಇಂದಿನ ಭಾರತೀಯ ಸಂಸ್ಕೃತಿಯ ಭಾಗ.

ಸೀರೆಯನ್ನು ಭಾರತೀಯ ಸಂಸ್ಕೃತಿಯ ಪ್ರತೀಕವೆಂದು ಉಲ್ಲೇಖಿಸುವವರಿಗೆ ಆಧುನಿಕ ದಿನಗಳಲ್ಲಿ ನಾನಾ ಕ್ಷೇತ್ರಗಳಲ್ಲಿ ದುಡಿಯುವ ಹೆಣ್ಣಿನ ಪಾಲಿಗೆ ಅದು ಎಷ್ಟೊಂದು ಅಸುರಕ್ಷಿತ ಮತ್ತು ಅಪಾಯಕಾರಿ ಉಡುಗೆ, ಸೀರೆಯ ಸೆರಗು ವಾಹನಗಳಿಗೆ, ಯಂತ್ರಗಳಿಗೆ ಸಿಕ್ಕು ಎಷ್ಟೊಂದು ಮಂದಿ ಜೀವ ಕಳೆದುಕೊಂಡಿದ್ದಾರೆ. ಅಪಾಯದ ಸಂದರ್ಭದಲ್ಲಿ ಓಡಿ ತಪ್ಪಿಸಿಕೊಳ್ಳುವ ಪ್ರಮೇಯ ಒದಗಿದಾಗ ಅದು ಎಂಥಾ ಒಂದು ಅಡ್ಡಿ ಎನ್ನುವುದರ ಅರಿವಿದೆಯೇ? ಭಾರತೀಯ ಸಂಸ್ಕೃತಿಯ ಪ್ರತೀಕ ಎನ್ನಲಾಗುವ ಸೀರೆಯು ಮೈಮಾಟ ಪ್ರದರ್ಶನಕ್ಕೆ ಎಷ್ಟೊಂದು ಅವಕಾಶ ಒದಗಿಸುತ್ತದೆ. ಅದನ್ನು ಎಷ್ಟೊಂದು ಸೆಕ್ಸಿಯಾಗಿಯೂ, ಪ್ರಚೋದಕವಾಗಿಯೂ ಉಡುವುದು ಸಾಧ್ಯವಿದೆಯೆಂಬ ವಾಸ್ತವದ ಅರಿವಿದೆಯೇ.

**ಯಾವುದು ಅಶ್ಲೀಲ?**

ಯಾವುದು ಅಶ್ಲೀಲ ಮತ್ತು ಅದನ್ನು ನಿರ್ಧರಿಸುವವರು ಯಾರು? ಉಡುವ ವ್ಯವಸ್ಥೆಯೇ ಇಲ್ಲದ ಕಾಲದಲ್ಲಿ ಮನುಷ್ಯರು ಬೆತ್ತಲೆಯೇ ಇದ್ದರು (ಈಗಲೂ ಕೆಲವೊಂದು ಆದಿವಾಸಿ ವರ್ಗಗಳಲ್ಲಿ ಮಹಿಳೆಯರು ತುಂಡು ಬಟ್ಟೆಯನ್ನೂ ಧರಿಸುವುದಿಲ್ಲ.) ಮಾನ ರಕ್ಷಣೆಯ ದೃಷ್ಟಿಯಿಂದ ಏನನ್ನಾದರೂ ಧರಿಸುವ ಪದ್ಧತಿ ಆರಂಭದ ಕಾಲದಲ್ಲಿ ಕೂಡಾ ಕೇವಲ ಸೊಂಟದ ಭಾಗವನ್ನೂ ಮಾತ್ರ ಮುಚ್ಚಿಕೊಳ್ಳುತ್ತಿದ್ದರು. ಭಾರತದಲ್ಲಿಯೇ ಕೆಲವೊಂದು ಭಾಗದಲ್ಲಿ ಮಹಿಳೆಯರು ಸೊಂಟದಿಂದ ಮೇಲ್ಭಾಗದಲ್ಲಿ ಏನನ್ನೂ ಧರಿಸುತ್ತಿರಲಿಲ್ಲ. ಕುಡುಬಿಗಳಂತಹ ಬುಡಕಟ್ಟು ಮಹಿಳೆಯರು ಎದೆ ಮುಚ್ಚಿಕೊಳ್ಳುವ ವಿಚಾರದಲ್ಲಿ ಅಷ್ಟೇನೂ ತಲೆಕೆಡಿಸಿಕೊಂಡವರಲ್ಲ. ಅತ್ಯಂತ ಪವಿತ್ರವೆಂದು ನಾವು ಹೇಳಿಕೊಳ್ಳುವ ಅನೇಕ ದೇವಸ್ಥಾನಗಳಲ್ಲಿ ಲೈಂಗಿಕ ಶಿಲ್ಪಗಳು ಯಥೇಚ್ಛವಾಗಿ ಕಾಣಸಿಗುತ್ತವೆ. ಖಜುರಾಹೋವಂತೂ ಇದರ ಮುಕುಟಮಣಿ. ನಮ್ಮ ಸಿನಿಮಾಗಳಲ್ಲಿ ಮತ್ತು ಜಾಹೀರಾತುಗಳಲ್ಲಿಯಂತೂ ತೋರಿಸುವುದಕ್ಕೆ ಬಾಕಿಯಾದರೂ ಏನು ಉಳಿದಿದೆ?

ಪಾಶ್ಚಿಮಾತ್ಯ ದೇಶಗಳಲ್ಲಿ ಸಾರ್ವಜನಿಕ

ವಾಗಿಯೇ ಹೆಣ್ಣುಗಂಡು ಚುಂಬಿಸುವುದು ಸಾಮಾನ್ಯ ಸಂಗತಿ. ಅಧಿಕೃತ ವೇಶ್ಯಾವಾಟಿಕೆಗಳು, ಬ್ಲೂಫಿಲಂ ಉದ್ಯಮ ಎಲ್ಲವೂ ಅಲ್ಲಿ ಸಾಮಾನ್ಯ. ಆದರೆ ನಮ್ಮಲ್ಲಿ ಅವೆಲ್ಲವೂ ಅಶ್ಲೀಲ ಮತ್ತು ಕಾನೂನುಬಾಹಿರ. ಯಾವುದು ಅಶ್ಲೀಲ ಮತ್ತು ಯಾವುದು ಸಭ್ಯತೆ ಎನ್ನುವುದು ವ್ಯಕ್ತಿಯೊಬ್ಬನ ಹಿನ್ನೆಲೆ ಮತ್ತು ಒಲವುಗಳ ಮೇಲೂ ನಿರ್ಧರಿತ ವಾಗುತ್ತವೆ. ಹೀಗಿರುವಾಗ ಈ ವಿಚಾರದಲ್ಲಿ ಎಲ್ಲ ರಿಗೂ ಅನ್ವಯವಾಗುವ ಎಲ್ಲರಿಗೂ ಒಪ್ಪಿಗೆಯಾಗುವ ಒಂದು ವ್ಯಾಖ್ಯಾನ ಇದೆಯೇ? ಮತ್ತು ಇರುವುದು ಸಾಧ್ಯವೇ ಅಶ್ಲೀಲ ಎನಿಸದ ಸಭ್ಯ ಉಡುಪು ಧರಿಸಿ ಎಂದು ಇವರು ಅಪ್ಪಣೆ ಕೊಡಿಸುತ್ತಾರಲ್ಲ, ಯಾವುದು ಅಶ್ಲೀಲ ಮತ್ತು ಸಭ್ಯ? ಹಾಗೆಯೇ, ಯಾರಿಗೆ ಅಶ್ಲೀಲ ಮತ್ತು ಸಭ್ಯ? ವಿಪರ್ಯಾಸದ ಸಂಗತಿಯೆಂದರೆ, ಹೆಣ್ಣು ಸೆಕ್ಸಿಯಾಗಿ ಕಾಣಲು ಏನನ್ನು ಧರಿಸಬೇಕು ಎಂದು ನಿರ್ಧರಿಸುವವನೂ ಗಂಡು (ಫ್ಯಾಷನ್‌ಪರೇಡು, ಸಿನಿಮಾ, ಜಾಹೀರಾತು, ಚಿತ್ರಕಲೆ, ನೃತ್ಯ ಮೊದಲಾದವನ್ನು ಗಮನಿಸಿ.) ಆಕೆ ಎಲ್ಲೆಲ್ಲಿ ಏನನ್ನೂ ಧರಿಸಕೂಡದು ಎಂದು ನಿರ್ಧರಿಸುವವನೂ ಗಂಡು. ಇದು ವಿಚಿತ್ರ!

### ನಿಜವಾದ ಅಶ್ಲೀಲತೆ ಎಂದರೆ

ಈ ಅರ್ಥದಲ್ಲಿ ಅಶ್ಲೀಲ ಎನ್ನುವ ಪದದ ವ್ಯಾಖ್ಯೆಯನ್ನೇ ಬದಲಾಯಿಸಬೇಕಾಗಿದೆ. ಅದು ಗ್ರಹಿಸುವ ಪೂರ್ವಗ್ರಹಪೀಡಿತ ಮನಸುಗಳಲ್ಲಿರುವುದು. ರೋಗಗ್ರಸ್ತ ಕಣ್ಣುಗಳಲ್ಲಿರುವುದು. ನಿಜವಾದ ಅಶ್ಲೀಲತೆ ಎಂದರೆ ಹೆಣ್ಣು ತನ್ನ ಭೋಗದ ಸರಕು ಎಂಬ ಧೋರಣೆಯನ್ನು ಅನುಸರಿಸುತ್ತಾ, ಹೆಣ್ಣನ್ನು ಆಕೆಯ ದೇಹ ದೇಹದ ಮೂಲಕವೇ ನೋಡುವ ಮನೋಭಾವ ಆಧರಿಸಿದ ಗಂಡಿನ ನಡವಳಿಕೆಗಳು. ನಿಯಂತ್ರಿಸಬೇಕಾದುದು ಮತ್ತು ನಿರ್ಬಂಧಿಸಬೇಕಾದುದು ಈ ಅಶ್ಲೀಲತೆಯನ್ನು ಈ ಅಸಭ್ಯತೆಯನ್ನು ಇವರು ಹೇಳುವ ಅಶ್ಲೀಲ ಉಡುಪು ಧರಿಸುವುದರಿಂದ ದೇವರಿಗೆ ಅವಮಾನವಾಗುತ್ತದೆ ಎಂಬ ಇವರ ವಾದವನ್ನು ಒಪ್ಪಿಕೊಂಡರೆ ದೇವರು ಸರ್ವಾಂತರ್ಯಾಮಿಯಾಗಿರುವ ನೆಲೆಯಲ್ಲಿ ತಾರ್ಕಿಕವಾಗಿ ಎಲ್ಲಿಯೂ ಅಂಥ ಬಟ್ಟೆ ಹಾಕಬಾರದು. ಇನ್ನೂ ಮುಂದುವರಿದು ಖಾಸಗಿ ಕೋಣೆಯಲ್ಲಿಯೂ ಯಾರೂ ಬೆತ್ತಲಾಗಬಾರದು. ಅದೆಲ್ಲ ಸರಿ. ಸಾರ್ವಜನಿಕ ಸ್ಥಳಗಳಲ್ಲಿ ಪುರುಷರು ಪ್ಯಾಂಟು ಜಾರಿಸಿ ಮೂತ್ರ ವಿಸರ್ಜನೆಗೆ ನಿಲ್ಲುತ್ತಾರಲ್ಲ. ಅದು ಅಸಭ್ಯವಲ್ಲವೆ? ನೆನಪಿರಲಿ, ಸ್ತ್ರೀಯರಿಗೆ ಸಭ್ಯತೆಯ ಬಗ್ಗೆ ಪುರುಷರಿಗಿಂತಲೂ ಹೆಚ್ಚಿನ ಕಾಳಜಿ ಇರುವುದರಿಂದಲೇ ವಯೋವೃದ್ಧೆಯನ್ನು ಒಳಗೊಂಡಂತೆ ಯಾವ ಮಹಿಳೆಯೂ, ಎಷ್ಟೇ ಕಷ್ಟವಾಗಲಿ ಹೀಗೆ ಸಾರ್ವಜನಿಕವಾಗಿ ಅಸಭ್ಯತೆಯನ್ನು ಪ್ರದರ್ಶಿಸುವುದಿಲ್ಲ.

### ವಸ್ತ್ರಸಂಹಿತೆಗಿಂತಲೂ ಸ್ವಚ್ಛತೆಗೆ ಮೊದಲ ಆದ್ಯತೆ ಇರಲಿ

ದುರಂತವೆಂದರೆ, ದೇಗುಲಗಳ ಆಡಳಿತದ ಚುಕ್ಕಾಣಿ ಹಿಡಿದ ಬಹುತೇಕ ಪುರುಷ ಮನಸುಗಳಿಗೆ ಧರ್ಮ, ದೇವರು, ಸಂಸ್ಕೃತಿ, ಪರಂಪರೆ, ಸಭ್ಯತೆ ಎಂಬುದರ ನಿಜವಾದ ಅರ್ಥವೇನೆಂಬುದರ ಅರಿವಿಲ್ಲ. ಧರ್ಮಕ್ಕೂ ಮಿಗಿಲಾದ ದೇಶದ ಸಂವಿಧಾನ ಏನು ಹೇಳುತ್ತದೆ. ಮಾನವಹಕ್ಕುಗಳು ಏನನ್ನು ಹೇಳುತ್ತವೆ ಎಂಬುದರ ಬಗ್ಗೆ ಗೌರವವಿಲ್ಲ. ಭಕ್ತಾದಿಗಳಿಗೆ ಅಧ್ಯಾತ್ಮಿಕ ಸಮಾಧಾನ ನೀಡಲು ದೇಗುಲಗಳು ಹೇಗಿರಬೇಕು ಮತ್ತು ಅಲ್ಲಿ ಎಂತಹ ಸುಧಾರಣೆಗಳಾಗಬೇಕು ಎಂಬ ಕನಿಷ್ಠ ಪ್ರಜ್ಞೆಯೂ ಇಲ್ಲ. ಅವರ ಇಂತಹ ಮಂದಿ ಕಾಲಕ್ಕೆ ಸಲ್ಲದ ಅರ್ಥಹೀನ ನಿರ್ಬಂಧಗಳನ್ನು ಹೇರಿ ತಾವು ಸಂಸ್ಕೃತಿ ರಕ್ಷಣೆ ಮಾಡುತ್ತಿದ್ದೇವೆ ಎಂದುಕೊಳ್ಳುತ್ತಾರೆ. ವಾಸ್ತವದಲ್ಲಿ ಅವರು ಮಾಡುತ್ತಿರುವುದು ಸಂಸ್ಕೃತಿಗೆ ಮಾತ್ರವಲ್ಲ, ದೇವರಿಗೂ ಅಪಮಾನ, ಅಪಚಾರ.

ನಮ್ಮ ಬಹುತೇಕ ದೇವಾಲಯಗಳು ದೈವ ಸಾಕ್ಷಾತ್ಕಾರಕ್ಕೆ ಅನುಕೂಲವಾಗುವ ರೀತಿಯಲ್ಲಿವೆಯೇ? ಅಲ್ಲಿನ ಗರ್ಭಗುಡಿ, ಸುತ್ತಲ ಪರಿಸರ ಎಷ್ಟರಮಟ್ಟಿಗೆ ಸ್ವಚ್ಛತೆಯಿಂದ ಕೂಡಿದೆ. ಅಲ್ಲಿ ಭಕ್ತಾದಿಗಳಿಗೆ ಶುಚಿತ್ವ ಹೊಂದಲು ಎಷ್ಟರಮಟ್ಟಿಗೆ ಶೌಚ ಸೌಲಭ್ಯಗಳನ್ನು ಮಾಡಿಕೊಡಲಾಗಿದೆ? ಸ್ವಚ್ಛತೆಯ ವಿಚಾರದಲ್ಲಿ ನಮ್ಮ ಬಹುತೇಕ ದೇಗುಲಗಳ ಪರಿಸ್ಥಿತಿಯನ್ನು ನೋಡುವಾಗ ಅಲ್ಲಿ ದೇವರು ನಿಲ್ಲುವುದು ಸಾಧ್ಯವೆಂದು ಅನಿಸುತ್ತದೆಯೇ? ಈ ವಿಚಾರದಲ್ಲಿ ಒಣಪ್ರತಿಷ್ಠೆ ಬದಿಗಿರಿಸಿ ಅನ್ಯಧರ್ಮೀಯರ ಚರ್ಚು, ದರ್ಗಾ, ಮಸೀದಿ, ಗುರುದ್ವಾರಗಳಿಗೆ ಭೇಟಿಕೊಟ್ಟು ಅವರಿಂದ ಕಲಿಯಬೇಕಾದ ಪಾಠ ಬಹಳಷ್ಟಿದೆ. ದೇಗುಲಗಳ ಪರಿಸರವನ್ನು ವ್ಯಾಪಾರಿ ದಂಧೆಯ ಕೇಂದ್ರವನ್ನಾಗಿಸುವ, ನಿಷೇಧಿತ, ನಿರ್ಬಂಧಿತ ಪ್ರದೇಶಗಳನ್ನಾಗಿಸುವ ಬದಲು ನಿಜವಾದ ಅರ್ಥದಲ್ಲಿ ಮನಸ್ಸಿಗೆ ನೆಮ್ಮದಿ ನೀಡುವ ತಾಣಗಳನ್ನಾಗಿ ಪರಿವರ್ತಿಸಿದಾಗ ಅಂತಹ ದೇಗುಲಗಳ ಸ್ಥಾಪನೆಯ ಮೂಲ ಉದ್ದೇಶವೂ ಈಡೇರುತ್ತದೆ. ಅಂತರಂಗ ಮತ್ತು ಬಹಿರಂಗ ಎರಡೂ ಶುದ್ಧಿಗೆ ಆಸ್ಪದವಿರುವ ಅಂತಹ ಪ್ರಶಾಂತ, ಪರಿಶುದ್ಧ ತಾಣದಲ್ಲಿ ದೇವರು ನೆಲೆಸುವ ಎಲ್ಲ ಸಾಧ್ಯತೆಯೂ ಇರುತ್ತದೆ.

**–ದುರ್ಗಾ ಎಸ್. ಭಟ್.**

# ಸೆಲ್ಫೀ ಯುಗ



ಈ ಹೊಸ ತಲೆಮಾರಿನ ಯುಗದಲ್ಲಿ ಸೆಲ್ಫೀಗಳು ವಿಶ್ವದಾದ್ಯಂತ ಎಲ್ಲೆಡೆ ತಲೆಯೆತ್ತಿವೆ. ಸಾಮಾನ್ಯ ಜನರಿರಲಿ. ಸದಾಕಾಲ ಕ್ಯಾಮರಾದ ಮುಂದೆಯೇ ಜೀವನ ಸಾಗಿಸುವ ಪ್ರಸಿದ್ಧ ತಾರೆಯರಿಗೂ ಸೆಲ್ಫೀಗಳ ಮೇಲೆ ವ್ಯಾಮೋಹ! ಕೆಲವರಿಗೆ ಸೆಲ್ಫೀಗಳಿಲ್ಲದ ಬದುಕಿಲ್ಲ! ಮತ್ತೆ ಕೆಲವರಿಗೆ ಅವುಗಳನ್ನು ಕಂಡರಾಗದು!

ಸೆಲ್ಫೀಗಳು ಸಾಮಾಜಿಕ ಸಮೂಹ ತಾಣಗಳ ಕಾರಣ ಇನ್ನೂ ಹೆಚ್ಚಿನ ಜನಪ್ರಿಯತೆಯನ್ನು ಗಳಿಸುತ್ತಾ ಹೋಗುತ್ತಿವೆ. ಇದು ಎಲ್ಲರ ಕೈಯಲ್ಲಿ ಈಗ ಸ್ಮಾರ್ಟ್ ಫೋನ್ ಅಥವಾ ಕ್ಯಾಮರಾಗಳು ಇರುವ ಕಾರಣಕ್ಕೋ? ಅಥವಾ ಫೋನುಗಳ ಮುಂದೆ, ಕ್ಯಾಮೆರಾದ ಮುಂದೆ ನಿಂತು ಮುಖ ತಿರುವಿ ಫೋಟೋಗಳಿಗೆ ಪೋಸ್ ಕೊಡುವ ಜನರ ಹೊಸ ಮಿದುಳಿನ ಮಿಡಿತವೋ? ಇವೆಲ್ಲಕ್ಕಿಂತ ಮೀರಿದ ಕಾರಣಗಳೂ ಇವೆಯೋ? ಒಟ್ಟಿನಲ್ಲಿ ಅವುಗಳ ಜನಪ್ರಿಯತೆ ಯುವಜನಾಂಗದಲ್ಲಿ ಇನ್ನಿಲ್ಲದಂತೆ ಕಾಣಿಸಿಕೊಂಡಿದೆ. ಇದರ ಹಿಂದೆ ಇರುವ ಮಾನಸಿಕ ಸ್ಥಿತಿ ಏನು?

2016ರ ಏಪ್ರಿಲ್‌ನಲ್ಲಿ ಬಂದ ವರದಿಗಳ ಪ್ರಕಾರ, ಒಟ್ಟು 8463 ದಶಲಕ್ಷ ಸಾಮಾಜಿಕ ತಾಣಗಳ ಅಕೌಂಟ್‌ಗಳು ಬಳಕೆಯಲ್ಲಿವೆ. ಫೇಸ್‌ಬುಕ್ ಅಗ್ರಸ್ಥಾನದಲ್ಲಿದ್ದು 1590 ದಶಲಕ್ಷ ಜನರು ಅದನ್ನು ಉಪಯೋಗಿಸುತ್ತಾರೆ. ಅದರ ಪ್ರತಿಸ್ಪರ್ಧಿ ವಾಟ್ಸ್ಯಾಪ್‌ನ್ನು 1000 ದಶಲಕ್ಷ ಅಕೌಂಟ್‌ಗಳು ಬಳಕೆಯಲ್ಲಿವೆ. ಫೇಸ್‌ಬುಕ್ ಮೆಸೆಂಜರ್ ಅನ್ನು 900 ದಶಲಕ್ಷ ಜನರು ಉಪಯೋಗಿಸಿದರೆ, ವಿಚಾಟ್ ಅನ್ನು 697 ದಶಲಕ್ಷ ಜನರು, ಕ್ಯೂಝೋನ್ ಅನ್ನು 640 ದಶಲಕ್ಷ ಜನರು ಬಳಸುತ್ತಾರೆ 555 ದಶಲಕ್ಷ ಬಳಕೆದಾರರೊಂದಿಗೆ ಟ್ವಿಟ್ಟರ್ ನದ್ದು ನಂತರದ ಸ್ಥಾನ ಹೀಗೆ ಈ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಈ ಪಟ್ಟಿಯಲ್ಲಿ ಒಬ್ಬನೇ ವ್ಯಕ್ತಿಗೆ/ಸಂಸ್ಥೆಗೆ ಹಲವು ತಾಣಗಳ ಅಕೌಂಟ್‌ಗಳೂ ಇರಬಹುದು. ಇವರಲ್ಲಿ ಬಹುತೇಕರು ಸೆಲ್ಫೀಗಳ ಪ್ರೇಮಿಗಳು!

**ಉದ್ದೇಶ ಏನು?**

ಇದನ್ನು ಮನುಷ್ಯನ ಮಾನಸಿಕ ಮತ್ತು ಮಿದುಳಿನ ಬೆಳವಣಿಗೆಯ ಜೊತೆ ಹೊಂದಿಸಿ ನೋಡೋಣ. ಕಾಲವನ್ನೂ ಜೊತೆಗೆ ಕೂಡೋಣ.

ಮಕ್ಕಳಾಗಿದ್ದಾಗ ಅವಮಾನದ ಆತಂಕ ಮನುಷ್ಯನಿಗಿರುವುದಿಲ್ಲ! ಸ್ವಲ್ಪ ಬೆಳೆದಂತೆ ಇನ್ನಿಲ್ಲದ ನಾಚಿಕೆ ತೋರುವ ಮಕ್ಕಳಲ್ಲಿ ತಮ್ಮನ್ನು ಮಾತನಾಡಿಸುವ, ಕೆನ್ನೆ ಸವರುವ ಇತರ ಜನರ ಬಗ್ಗೆ ವಿಶೇಷ ಅಂಜಿಕೆ ಬರುವುದನ್ನು ಕಾಣುತ್ತೇವೆ.

ಇದು ಮನುಷ್ಯನ ಮಿದಿಳಿನ ಸಂಕೀರ್ಣ ಚಿಂತನೆಯ ಶಕ್ತಿಯನ್ನು ಮತ್ತು ಗಮನಿಸುವ ಮೂಲಕ ಕಲಿಯುವಿಕೆಯನ್ನು ಸೂಚಿಸುತ್ತದೆ. ಜತೆಗೆ ವಿಚಾರಗಳನ್ನು ವಿಶ್ಲೇಷಿಸುವ ಮಾನವನ ಮಿದುಳಿನ ಕ್ರಿಯೆಯನ್ನೂ ಸೂಚಿಸುತ್ತದೆ. ಮಾತನಾಡಿಸಿದರೆ ನಾಚಿ ಅಪ್ಪ–ಅಮ್ಮನ ಹಿಂದಕ್ಕೆ ಸರಿಯುವ 5–6 ವರ್ಷದ ಮಕ್ಕಳು ಆ ಹೊತ್ತಿಗಾಗಲೇ ಈ ಕ್ರಿಯೆಯಲ್ಲಿ ತೊಡಗಿಕೊಂಡಿರುತ್ತಾರೆ.

ತಾರುಣ್ಯಕ್ಕೆ ಬರುವ ವೇಳೆಗೆ ತಮ್ಮ ದೇಹದ ಬದಲಾವಣೆಗಳನ್ನು ಗಮನಿಸುವ ಮನುಷ್ಯನ ಮೆದುಳು ಒಂದು ಬಗೆಯ ವಿಶೇಷವಾಗಿ ಗುರುತಿಸಿಕೊಳ್ಳುವ, ತನ್ನತನದ ಅರಿವಿನ (ಸೆಲ್ಫ್ ಇಮೇಜ್) ಬಗ್ಗೆ ಜಾಗೃತಗೊಳುತ್ತದೆ. ಮಕ್ಕಳಲ್ಲಿ ಇದು ಸಂಕೀರ್ಣ ಮನಸ್ಥಿತಿಯ ಸಮಯ.

ಮನೆಯವರ ಬಳಿ ಕೂಡ ಹೇಳಿಕೊಳ್ಳಲಾಗದ ತುಮುಲಗಳನ್ನು ಹೊಂದಿರುವ ಈ ಸಮಯ ಸಂಕೀರ್ಣವಾದದ್ದು. ಹಿಂದಿನ ತಲೆಮಾರಿನಲ್ಲಾಗಿದ್ದರೆ, ಗೆಳತಿಯರು, ಗೆಳೆಯರಲ್ಲಿ ಮಾತ್ರ ಹೇಳಿಕೊಳ್ಳಬಹುದಾದ ಕೆಲವು ಭಾವನೆಗಳಿಗೆ, ಭಾವನೆಯ ವಿಕಾರಗಳಿಗೆ ಈ ತಲೆಮಾರಿನಲ್ಲಿ ಸೋಶಿಯಲ್ ಮೀಡಿಯಾಗಳು ಒಂದು ಬಗೆಯಲ್ಲಿ ನಿರಾಳತೆಯನ್ನು ಒದಗಿಸಿವೆ.

ಕನ್ನಡಿಯಲ್ಲಿ ನಿರುಕಿಸಿ ಮಾತ್ರ ತಣಿಯದ

ಕುತೂಹಲಗಳನ್ನು, ಬಾಡಿ ಇಮೇಜಿನ ಬಗೆಯ ಹೆಮ್ಮೆಯನ್ನು, ಸಂಕೋಚ ಗಳನ್ನು ಸೆಲ್ಫೀಗಳ ಮೂಲಕ ಹೊರಹಾಕುವ ದಾರಿ ಈಗಿನ ತಲೆಮಾರಿನವರಿಗೆ ಸಿಕ್ಕಿದೆ. ಇದಕ್ಕೆ ಯಾವ ಹಂಗೂ ಇಲ್ಲದ ಕಾರಣ, ಯುವಜನರಲ್ಲಿ ಈ ಬಗ್ಗೆ ಅಪಾರ ಪ್ರೀತಿಯಿದೆ. ವ್ಯಾಮೋಹವೂ ಇದೆ. ಈ ಮಾಧ್ಯಮಗಳಲ್ಲಿ ಇವರೇ ನಿಯಂತ್ರಕರು. ಸಾಮಾಜಿಕ ತಾಣಗಳು ಸಿನಿಮಾ ತಾರೆಯರಿಗೆ ಕೊಡುವಷ್ಟೇ ಸ್ವೇಚ್ಛೆಯನ್ನು ಸಾಮಾನ್ಯರಿಗೂ ಕೊಟ್ಟಿವೆ. ಇಲ್ಲಿ ಎಲ್ಲರೂ ತಾರೆಯರೇ! ಹಾಗಾಗಿ ಸೆಲ್ಫೀಗಳನ್ನು ಜನ ದಿನನಿತ್ಯ ಎಲ್ಲ ಸಂದರ್ಭಗಳಲ್ಲಿ ಅಂದರೆ ತಿನ್ನುವಾಗ, ಉಣ್ಣುವಾಗ, ಅತಿಥಿಗಳು ಬಂದಾಗ, ಪ್ರವಾಸ ಹೋದಾಗ, ವಿಶೇಷ ಸಂದರ್ಭಗಳಲ್ಲಿ, ಹೊಸವರ್ಷ, ಹುಟ್ಟಿದಹಬ್ಬ, ಕಾಲೇಜು ದಿನಗಳಲ್ಲಿ ಅವರು ಮಾಡಿದ ಉತ್ತಮ ಕೆಲಸಗಳ ಪ್ರಚಾರಕ್ಕಾಗಿ– ಹೀಗೆ ಇನ್ನಿಲ್ಲದಂತೆ ತೆಗೆದುಕೊಳ್ಳುವ ಕೆಲಸದಲ್ಲಿ ತೊಡಗಿದ್ದಾರೆ.

**ಸೆಲ್ಫೀಗಳ ಸೈಕಾಲಜಿ**

ಸೆಲ್ಫೀಗಳ ಹಿಂದಿನ ಮಾನಸಿಕ ಸ್ಥಿತಿಯನ್ನು ಮನೋತಜ್ಞರು 3 ರೀತಿಯಲ್ಲಿ ನೋಡುತ್ತಾರೆ.

1. ತಮ್ಮತನವನ್ನು ವಿಜೃಂಭಿಸಿ ನೋಡಿ ಕೊಳ್ಳುವ ಮನುಷ್ಯನ ದೌರ್ಬಲ್ಯ ಅಥವಾ ಆಸೆ. ಇದು ಅವನ ವೈಯಕ್ತಿಕವಾಗಿ ಮಾತ್ರ ಕೇಂದ್ರೀಕೃತ ವಾಗಿರುವ ದೃಷ್ಟಿಕೋನವನ್ನು ಸೂಚಿಸುವಂತದ್ದು. ಸೆಲ್ಫಿ ತೆಗೆದುಕೊಳ್ಳುವ ಜನರಿಗೆ ತಮ್ಮನ್ನು ತಾವು ಮೆರೆಸಿಕೊಳ್ಳುವ ಮಾನಸಿಕ ಅಗತ್ಯಗಳಿರುತ್ತವೆ.

2. ಥಟ್ಟಂತ ದುಡುಕುವ ಸ್ವಭಾವ. ಇವರಲ್ಲಿ ಇನ್ನೊಬ್ಬರನ್ನು ಅರ್ಥಮಾಡಿಕೊಳ್ಳುವ ಸ್ವಭಾವದ ಲೋಪವಿರುವುದು. ಇವರಲ್ಲಿ ನೀತಿಯು ನಡವಳಿಕೆಗಳೂ ಕಡಿಮೆ ಇದೆ ಎನ್ನುತ್ತಾರೆ.

3. ತಮ್ಮ ದೇಹವನ್ನು ಅದರ ಲೈಂಗಿಕ ಮೌಲ್ಯಕ್ಕೆ ಅನುಸಾರವಾಗಿ ಅಳೆಯುವ ಗುಣ. ಇವರಲ್ಲಿ ತಮ್ಮ ದೇಹವನ್ನು ಆತ್ಮದ ಹೊರತಾಗಿ ಒಂದು ಸಾಧನವನ್ನಾಗಿ ನೋಡುವ ಗುಣಗಳಿರು ತ್ತವೆ. ಇದೇ ಕಾರಣಕ್ಕೆ ಇತರರ ಮೌಲ್ಯವನ್ನು ಕೂಡ ಇದೇ ಆಧಾರದ ಮೇಲೆ ನೋಡುವ ಗುಣ ವನ್ನು ಹೊಂದಿರುತ್ತಾರೆ. ಸಮಯ ಸಿಕ್ಕಾಗಲೆಲ್ಲಾ 'ನಾನು ನಿನಗಿಂತ ಉತ್ತಮ ಎಂದು ಸಾಧಿಸಿ ತೋರಿಸುವ ಅಥವಾ ತಾನು ಮಹಾನ್ ಎಂದು ತನಗೆ ತಾನೇ ಭರವಸೆ ಕೊಟ್ಟುಕೊಳ್ಳುವ ಪ್ರವೃತ್ತಿಯಲ್ಲಿ ತೊಡಗಿರುವ ಜನ.

18–40 ವಯಸ್ಸಿನ ಜನರನ್ನು ಸಂಶೋ ಧನೆಗೆ ಒಳಪಡಿಸಿ ಅವರು ಸೆಲ್ಫೀಗಳನ್ನು ತೆಗೆದು ಕೊಳ್ಳಲು ಬಳಸಿದ ಸಮಯ, ಪಟ್ಟಶ್ರಮ, ಅದರ ನಂತರ ಅದನ್ನು ಎಡಿಟ್ ಮಾಡಲು, ಕ್ರಾಪ್ ಮಾಡಲು, ರಿ ಟಚ್ ಮಾಡಲು ಪಟ್ಟ ಪ್ರಯತ್ನದ ಆಧಾರದ ಮೇಲೆ ಈ ಮೇಲಿನ ಫಲಿತಾಂಶವನ್ನು ಪಡೆಯಲಾಗಿದೆ.

ಇತ್ತೀಚೆಗೆ ಆಕ್ಸ್‌ಫರ್ಡ್ ಶಬ್ದಕೋಶವೂ ಸೆಲ್ಫೀ ಎನ್ನುವ ಪದವನ್ನು ಸೇರಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಮನೋತಜ್ಞರು ಹೊಸ ವ್ಯಾಖ್ಯಾನಗಳನ್ನು ನೀಡುತ್ತಿದ್ದಾರೆ.

**ಸೆಲ್ಫೀಗಳ ಮಿತಿ**

ಮಾನಸಿಕವಾಗಿ ಹೇಳಬೇಕೆಂದರೆ, ಕಾಲ ಬದಲಾಗಿದ್ದರೂ ಸ್ಥಿತಿ ಬದಲಾಗಿಲ್ಲ. ಯುವಜನರು ಸೆಲ್ಫೀಗಳಿಲ್ಲದೆ ಬದುಕು ಇಲ್ಲ ಎಂಬ ಪರಿಸ್ಥಿತಿಯನ್ನು ತಲುಪಿದ್ದಾರೆ. 'ಅವಳ ಬಳಿ 5000 ಸೆಲ್ಫೀಗಳಿವೆ. ನನ್ನ ಬಳಿ 500 ಕೂಡಾ ಇಲ್ಲ' ಎನ್ನುವ ಸ್ಪರ್ಧೆ ಇಲ್ಲಿಯೂ ಬೆಳೆಯುತ್ತಿದೆ.

ಸಾಮಾಜಿಕ ತಾಣಗಳ ಪೈಪೋಟಿ ವೈಯಕ್ತಿಕ ಬದುಕಿಗೂ ಹರಡಿದೆ. ಸಾರ್ಥಕತೆ, ದುಗುಡಗಳು, ಪೈಪೋಟಿ, ಹೆಚ್ಚು ಜನರಿಂದ ಗುರುತಿಸಿಕೊಳ್ಳುವ ತವಕ, ಇನ್ನೊಬ್ಬರ ಮೇಲಿನ ಮತ್ಸರ, ಸ್ಪರ್ಧೆಗಳು ಹೊಸ ಆಯಾಮವನ್ನು ಪಡೆದುಕೊಂಡಿವೆ.

ಈ ಮಾಧ್ಯಮಗಳಲ್ಲಿ ಜನರು ವ್ಯಯಿಸು ತ್ತಿರುವ ಕಾಲವೂ ಅತ್ಯಂತ ಹೆಚ್ಚು! ವಿದ್ಯಾರ್ಥಿಯಾಗಿ ಕಲಿಯುವ ಸಮಯದಲ್ಲಿ ಈ ರೀತಿ ಸಮಯವನ್ನು ವ್ಯರ್ಥ ಮಾಡಿದರೆ ಗುರಿಯೇ ಮಸುಕಾಗಿಬಿಡು ವುದು ಅಪಾಯಕಾರಿ. ಸೆಲ್ಫೀಗಳು ಒಂದೆಡೆ ತರುವ ಆತ್ಮತೃಪ್ತಿ ಮಿತಿಮೀರಿದ ಆಕಾಂಕ್ಷೆಗಳಿಂದ ಮಸುಕಾ ದಲ್ಲಿ ಅತೃಪ್ತಿಯಾಗಿ ಮಾರ್ಪಾಡು ಆಗಬಹುದು. ಮರಣಗಳು, ಅಪಘಾತಗಳ ಸಂಖ್ಯೆಯನ್ನು ಗಮನಿಸಿದರೆ ಸೆಲ್ಫೀಗಳನ್ನು ತೆಗೆದುಕೊಳ್ಳುವ ಜನರು ಹುಂಬರೆಂದು ನಂಬುವ ಇತರರ ದೃಷ್ಟಿಕೋನಕ್ಕೆ ಮೊನಚು ದೊರೆಯುತ್ತದೆ.

ತಮ್ಮ ವಿಚಿತ್ರ ದಾಹದ ಉಡುಪುಗಳನ್ನು ಖರೀದಿಸಿ, ಉಟ್ಟು, ಸೆಲ್ಫೀಗಳನ್ನು ತೆಗೆದುಕೊಂಡು ಪೋಸ್ಟ್ ಮಾಡಿದರೂ, ಸಮಾಜದಲ್ಲಿ ಅವುಗಳನ್ನು ತೊಟ್ಟು ಬದುಕಲು ಆಗದವರಿದ್ದಾರೆ. ಅವರ ತಾರಾ

ಬದುಕಿನ ಕಲ್ಪನೆಗಳು, ಆಸೆಗಳು ಇವುಗಳ ಮೂಲಕ ಹೊರಹೊಮ್ಮಬಹುದು. ತಮ್ಮ ಘನತೆಯನ್ನು ಏರಿಸಿಕೊಳ್ಳಲೆಂದೇ ಸೆಲ್ಫೀಗಳನ್ನು ಪೋಸ್ಟ್ ಮಾಡುವವರು ಇದ್ದಾರೆ. ಇನ್ನೊಬ್ಬರ ಸಹಾಯವಿಲ್ಲದೆ ಸೆಲ್ಫೀ ತೆಗೆದುಕೊಳ್ಳುವ ಕಾರಣ ಒಮ್ಮೊಮ್ಮೆ ಜನರ ಗುರುತಿನ ಜೊತೆಗೆ ಅವರ ಒಳಗಿನ ವ್ಯಕ್ತಿಯ ಗುರುತನ್ನು ಕೂಡ ಸೆಲ್ಫೀಗಳು ಒದಗಿಸಿಬಿಡುತ್ತವೆ.

ಪ್ರತಿ ಲೈಕುಗಳಿಗೆ ಇನ್ನೊಂದು ಲೈಕನ್ನು ಬೇಡುವ ಮಾನಸಿಕ ಸ್ಥಿತಿಯ ಚಕ್ರದಲ್ಲೂ ಯುವ ಜನತೆಯನ್ನು ಈ ಸೆಲ್ಫೀ ಮೋಹ ಸಿಲುಕಿಸಿದೆ. ಸೆಲ್ಫೀಗಳ ಹುಚ್ಚನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳುವುದು ಅತಿಮುಖ್ಯ. ಇಲ್ಲದಿದ್ದಲ್ಲಿ ಜೀವನದ ಹಲವು ದುರಂತಗಳಿಗೆ ಹಲವರ ನಿಂದನೆಗಳಿಗೆ ನಿರಾಕರಣೆಗೆ ಕೂಡ ಜನರನ್ನು ಇವು ಸಿಕ್ಕಿಸಬಲ್ಲವು.

ಸೆಲ್ಫೀಗಳ ಹಿಂದಿರುವ ಮನೋಧರ್ಮ ಆತ್ಮತೃಪ್ತಿ ಎಂದರೆ ಸುಳ್ಳಾಗಲಾರದು. ಎಲ್ಲಕ್ಕಿಂತ ಹೆಚ್ಚಾಗಿ, ಮನೆಯವರನ್ನು ಹೊರತುಪಡಿಸಿ, ಬೇರೆಯವರು ಭೇಷ್ ಎಂದಾರೆಯೇ ಎಂಬ ಕುತೂಹಲದ ತಣಿಸುವಿಕೆ. ಜನರಿಂದ ಸಿಗುವ ಅಂಗೀಕಾರದ ತೃಪ್ತಿ ಹಲವರ ಗಮನವನ್ನು ಸೆಳೆದ ಸಾರ್ಥಕತೆ.

ಸೆಲ್ಫೀಗಳ ಮೋಹವನ್ನು ಹದ್ದುಬಸ್ತಿನಲ್ಲಿ ಇಡಲು ನಿಯಮಗಳನ್ನು ಬಳಸಬಹುದೆ? ಇದು ಕಾನೂನಿನ ವ್ಯಾಪ್ತಿಗೆ ಒಳಪಡುವುದು ಹೇಗೆ? ಸ್ವಯಂನಿಯಂತ್ರಣವೇ ಇದಕ್ಕೆ ಸೂಕ್ತ ಔಷಧಿಯೇ? ಇನ್ನಷ್ಟು ಚರ್ಚೆ ನಡೆಸಬಹುದು.

---

# ಬದುಕಲು ಕಲಿಯಿರಿ

## ಸಾರ್ವಕಾಲಿಕ ಸರಳ ಚಿಕಿತ್ಸೆ

ಕಾಯಿಲೆಯನ್ನು ಓಡಿಸುವ ಪುರಾತನ ಸಾರ್ವಕಾಲಿಕ ಸರಳ ಸೂತ್ರಗಳಿವು.

- ಜೀವಿಗಳಲ್ಲಿ ಅನುಕಂಪ, ದಯೆ, ಸಹಾನುಭೂತಿಗಳನ್ನು ಬೆಳೆಸಿ ಉಳಿಸಿಕೊಂಡಲ್ಲಿ ತನ್ಮೂಲಕ ಆಂತರಿಕ ಸುಖ–ಸಂತೋಷಗಳು ಹೆಚ್ಚುತ್ತವೆ ಮಾತ್ರವಲ್ಲ. ಎಲ್ಲ ಜೀರ್ಣರಸಗಳ ನಿರಾತಂಕ ಉತ್ಪಾದನೆಯಿಂದ ಸಂಬಂಧಿತ ರೋಗ–ರುಜಿನಗಳು ದೂರವಾಗುತ್ತವೆ.

- ನಿಃಸ್ವಾರ್ಥತೆ, ಕಾರ್ಯತತ್ಪರತೆ, ವಿಶಾಲ ಮನೋಭಾವಗಳನ್ನು ರೂಢಿಸಿಕೊಂಡಲ್ಲಿ ದೈಹಿಕ ದೃಢತೆ ಹಾಗೂ ಮಾನಸಿಕ ಸ್ಥಿರತೆ ಹೆಚ್ಚಿ, ಪದೇ ಪದೇ ಆರೋಗ್ಯ ಕೆಡುವ ಸಂಭವವೇ ಇರುವುದಿಲ್ಲ.

- ಬಿಗುವನ್ನು ತೊರೆದು ನಗುವನ್ನು ಹೊರಸೂಸುತ್ತಾ ಆತ್ಮವಿಶ್ವಾಸದ ಕೆಚ್ಚಿನಿಂದ ಮುನ್ನಡೆದಲ್ಲಿ ಪರಸ್ಪರ ವೈಷಮ್ಯದ ವಿರೋಧದ ಯಾವುದೇ ಗಾಯವನ್ನೂ ಬೇಗ ವಾಸಿ ಮಾಡಬಹುದು.

- ಪರೋಪಕಾರ ಗುಣ, ಉದಾರತೆ ಹಾಗೂ ಸಹಕಾರ ಮನೋಭಾವ ಇವುಗಳನ್ನು ಮೈಗೂಡಿಸಿಕೊಂಡಲ್ಲಿ ಆಂತರಿಕ ಸಾಮರಸ್ಯವು ಕಂಡುಬಂದು. ದೇಹದ ಕೀಲುಗಳ ಬಿಗಿ ಕಣ್ಮರೆಯಾಗಿ ಚಲನವಲನಗಳಲ್ಲಿ ಹೊಸತನ ಕಂಡುಬರುತ್ತದೆ.

- ತನ್ನಂತೆ ಇತರರು ಎಂಬ ವಿಶ್ವ ಭ್ರಾತೃತ್ವದ ಈ ವಿಶಾಲ ಮನೋಭಾವವನ್ನು ದೇಹದ ಕಣ ಕಣದಲ್ಲೂ ತುಂಬಿಕೊಂಡು, ಹೃದಯದ ಮಿಡಿತದೊಂದಿಗೆ ಪ್ರತಿಸ್ಪಂದಿಸುತ್ತಿದ್ದರೆ ಕಳ್ಳತನ, ಕೊಲೆ, ಸುಲಿಗೆ, ಅನ್ಯಾಯ, ಅನಾಚಾರಗಳ ಯಾವ ಸಾಂಕ್ರಾಮಿಕ ರೋಗವೂ ಬಂದು ತಟ್ಟದು.

- 'ತಾಳಿದವ ಬಾಳಿಯಾನು' ಎಂಬುದನ್ನು ನೆಚ್ಚಿ ಸಹನೆಯನ್ನು ಹೆಚ್ಚಿಸಿಕೊಂಡು ವರ್ತಿಸಿದಲ್ಲಿ ದೂರದೃಷ್ಟಿಯೊಂದಿಗೆ ಅಂತರ್‌ದೃಷ್ಟಿಯೂ ವೃದ್ಧಿಸಿ ಬಾಳು ಬೆಳಗುತ್ತ ಹೋದೀತು, ಜೀವನ ಜೇನಾದೀತು.

- 'ಮಾತು ಕಡಿಮೆ, ಜಾಸ್ತಿ ದುಡಿಮೆ' ಎಂಬೀ ತತ್ತ್ವದನ್ವಯ ಅನಾವಶ್ಯಕ ಮಾತುಕತೆಗಳನ್ನೂ, ಕ್ಷುಲ್ಲಕ ವ್ಯವಹಾರಗಳನ್ನೂ ನಿಲ್ಲಿಸಿ ಕಾರ್ಯೋನ್ಮುಖರಾದಲ್ಲಿ ಆಸ್ಪತ್ರೆಯ ಒಳರೋಗಿಯಾಗಿ ನರಳುವ ಪ್ರಮೇಯವೇ ಬಾರದು. ಬಂಗಾರದ ಬದುಕು ಕನ್ನಡಿಯೊಳಗಿನ ಗಂಟಿನಂತೆ ಎಂದೆಂದಿಗೂ ಆಗದು.

- ಪೂರ್ವಾಪರ ವಿಮರ್ಶೆ ಹಾಗೂ ವಿವೇಕಗಳನ್ನು ನಿಮ್ಮದಾಗಿಸಿಕೊಂಡಲ್ಲಿ, ಎಂಥ ಜಟಿಲ ಸಂದಿಗ್ಧ ಸನ್ನಿವೇಶಗಳಲ್ಲೂ ಯಶಸ್ಸು ನಿಮ್ಮದಾಗಬಲ್ಲದು. ಎಂಥ ವಿಷಮ ಪರಿಸ್ಥಿತಿಯನ್ನೂ ಸರಿಪಡಿಸುವ ನವಶಕ್ತಿ ಸಂಜೀವಿನಿಯ ರಸಭರಿತ ಟಾನಿಕ್ ಇದಲ್ಲದೆ ಬೇರೆ ಇರದು.

**–ಸ್ವಾಮಿ ಜಗದಾತ್ಮಾನಂದ**

WISH YOU ALL OF THEM JULY 2018 HAVE A VERY HAPPY BIRTHDAY. GOD BLESS YOU. ALL YOUR DREAMS TO BE FULLFILLED. HAVE A NICE DAY AND KEEP ALWAYS LAUGHING IN YOUR LIFE

| | | |
|---|---|---|
| 1 | Latha | Mysuru |
| 2 | Usha | Mantralaya |
| 3 | Shamala | Moodbidre |
| 4 | Sindhu B Rupesh | IAS Officer |
| | Renuka Chidambaram | IAS Officer |
| 5 | Hima | Delhi |
| 6 | Sowbhagya | Mysuru |
| 7 | Shilpa | Calicut |
| 8 | Jalaja | Bengaluru |
| 9 | Neelambari | Bangalore |
| 10 | Shalini | Mandya |
| 11 | Radhika | Ooty |
| 12 | Ramya | Belgaum |
| 13 | Malathi | Karwar |
| 13 | Parimala | Poona |
| 14 | Tulasi | Nanjangud |
| 15 | Vandana Gurnani | IAS Officer |
| 16 | Kalashree | Kolar |
| 17 | Shilpashree | Maddur |
| 18 | Manjula | Ranibennur |
| 19 | Shreekala | Kundapur |
| 20 | Ragini | Guntur |
| 21 | Indrakshi | Mandya |
| 22 | Gamini | Bengaluru |
| 23 | Shantha | Puttur |
| 24 | Manjushree N | IAS Officer |
| 25 | Vinoth Priya R | IAS Officer |
| 26 | Janaki | Shimogga |
| 27 | Sheela | Bellary |
| 28 | Ganga | Mysuru |
| 29 | Deepti | Calicut |
| 30 | Rohini | Coimbattur |
| 31 | Kanaka | Jaipur |

## ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ

**9. ಆರ್ಮುಗಂ, ಕೊಯಂಬತ್ತೂರು**

ರಾಮಬಾಣಕ್ಕೂ, ಲಕ್ಷ್ಮಣ ರೇಖೆಗೂ ವ್ಯತ್ಯಾಸವೇನು?

– ರಾಮಬಾಣ ಅಂದಿಗೆ ಮಾತ್ರ ಸೀಮಿತ, ಲಕ್ಷ್ಮಣರೇಕೆ ಇಂದಿಗೂ ಜಿರಳೆಗಳನ್ನು ಕೊಲ್ಲುತ್ತಿದೆ!

**10. ಕುಮಾರಿ, ರಾಣಿಬೆನ್ನೂರು.**

ಹೆಂಡತಿಗೂ, ಗೂಢಚಾರಿಣಿಗೂ ಏನು ವ್ಯತ್ಯಾಸ?

– ಗೂಢಚಾರಿಣಿ ಗೋಪ್ಯತೆಯನ್ನು ಮಾತ್ರ ಜಾಲಾಡುತ್ತಾಳೆ, ಆದರೆ ಹೆಂಡತಿ ಇಡೀ ಜನ್ಮವನ್ನೇ ಜಾಲಾಡುತ್ತಾಳೆ.

**11. ಸವಿತ, ಬಾಳೆಹೊನ್ನೂರು.**

ಸಾರವಿಲ್ಲದ ಸಂಸಾರಕ್ಕೂ, ಸತ್ವವಿಲ್ಲದ ಸನ್ಯಾಸತ್ವಕ್ಕೂ ವ್ಯತ್ಯಾಸವೇನು?

– ಮೊದಲನೆಯದರಲ್ಲಿ ರಗಳೆ ಹೆಚ್ಚು, ಎರಡನೆಯದರಲ್ಲಿ ಬೊಗಳೆ ಹೆಚ್ಚು!

**12. ಗಾನಾಸುಮ, ಪಾಂಡವಪುರ**

ಮದುವೆಯಾದ ಹೆಂಡತಿಯರಲ್ಲೇಕೆ ಹೆಣ್ತನ ಪಲಾಯನ ಮಾಡಿಬಿಡುತ್ತೆ?

– ತಾಯ್ತನ ಕಾಲಿರಿಸುವುದರಿಂದ

**13. ಸುಂದರಿ, ಚಿಕ್ಕಮಗಳೂರು**

ಪ್ರೇಮ ವಿವಾಹಗಳು ಹೆಚ್ಚಾಗಲು ಕಾರಣವೇನು?

– ಪ್ರೇಯಸಿಯೇ, ಸುಮ್ಮನೆ ಲವ್ ಮಾಡ್ಕೊಂಡಿರೋಣಾಂದ್ರೆ ಕೇಳೋರೆ ಇಲ್ಲ!

**14. ಗುಣವಂತ ಬೆಳಗಾಂ**

ಮೋಕ್ಷಕ್ಕೂ, ಕಪಾಳ ಮೋಕ್ಷಕ್ಕೂ ಏನು ವ್ಯತ್ಯಾಸ?

– ಎರಡೂ ಕಣ್ಣುಮುಚ್ಚಿ ಕುಳಿತರೆ ಮೋಕ್ಷ, ಒಂದೇ ಕಣ್ಣು ಮುಚ್ಚಿ ತೆಗೆದು ಮಾಡಿದರೆ ಕಪಾಳಮೋಕ್ಷ!

**15. ರಾಜೇಂದ್ರ, ಹಾಸನ**

ಕುಮಾರಸ್ವಾಮಿ ಪ್ರಧಾನಮಂತ್ರಿ, ರೇವಣ್ಣ ಮುಖ್ಯಮಂತ್ರಿಯಾದರೆ, ದೇವೇಗೌಡರು ಏನಾಗುತ್ತಾರೆ?

–ಅವರು ಹಣ್ಣು ಹಣ್ಣು ಮುದುಕರಾಗುತ್ತಾರೆ. ಅಷ್ಟೇ!

**16. ಆನಂದ, ಚಿತ್ರದುರ್ಗ**

ಪಾರ್ಥೇನಿಯಂ ಗಿಡವನ್ನು ಕಾಂಗ್ರೆಸ್ ಗಿಡ ಎಂದು ಕರೆಯುವುದೇಕೆ?

– ಎಲ್ಲೆಲ್ಲೂ ಹರಡಿದ್ದರೂ ಏನೇನೂ ಪ್ರಯೋಜನ ಇಲ್ಲದಿರುವುದಿರಂದ!

**17. ಶಿವಮೂರ್ತಿ, ಮಳವಳ್ಳಿ**

ನೈತಿಕ ಸಂಬಂಧಕ್ಕೂ, ಅನೈತಿಕ ಸಂಬಂಧಕ್ಕೂ ಇರುವ ವ್ಯತ್ಯಾಸವೇನು?

– ಒಂದು ನಿರಾಳ, ಮತ್ತೊಂದು ಕರಾಳ

**18. ರಮೇಶ್, ಬೆಂಗಳೂರು**

ದೇಶ ಸೇವೆಯೇ ಈಶ ಸೇವೆ, ದೇಶ ನಾಯಕರ ಸೇವೆ?

– ಫಸ್ಟ್ ಕ್ಲಾಸ್, ಒರಿಜಿನಲ್ ಚಮಚಗಿರಿ!

## ಪರ್ಫೆಕ್ಟ್ ಹ್ಯಾಂಡ್‌ಬ್ಯಾಗ್‌ನ ಕಾಲವಿದು



ಸಮಯ ಸರಿದಂತೆ ಪ್ರತಿ ಒಂದೊಂದು ವಸ್ತುವಿನ ಬಗೆಗಿನ ಕ್ರೇಜ್ ಕಡಿಮೆಯಾಗುತ್ತದೆ ಅಥವಾ ಹೆಚ್ಚುತ್ತಾ ಹೋಗುತ್ತದೆ ಒಂದು ಕಾಲದಲ್ಲಿ ಹ್ಯಾಂಡ್‌ಬ್ಯಾಗ್ ಕ್ರೇಜ್ ಇಷ್ಟೊಂದು ಇರಲಿಲ್ಲ. ಹೆಗಲಿಗೆ ಹ್ಯಾಂಡ್‌ಬ್ಯಾಗ್ ಏರಿಸಿಕೊಂಡು ಹೋಗುವುದು ಒಂದು ಫಾರ್ಮಾಲಿಟಿ ಆಗಿತ್ತಷ್ಟೆ. ಆದರೆ ಕ್ರಮೇಣ ಅದರ ಕ್ರೇಜ್ ಹೆಚ್ಚುತ್ತಾ ಬಂದಿತು. ಕಾಲೇಜಿನ ಕನ್ಯೆಯಾಗಿರಲಿ ಅಥವಾ ಉದ್ಯೋಗಸ್ಥ ಮಹಿಳೆಯಾಗಿರಲಿ, ಇಂದು ಹ್ಯಾಂಡ್‌ಬ್ಯಾಗ್ ಒಂದು ಅಗತ್ಯವಾಗಿರುವುದರ ಜೊತೆಗೆ ಫ್ಯಾಷನ್ ಸಿಂಬಲ್ ಸಹ ಆಗಿದೆ.

**ಫ್ಯಾಷನ್ ವೀಕ್‌ನಲ್ಲೂ ಬ್ಯಾಗ್‌ನ ಮೋಡಿ**

ಇಂದು ಡಿಸೈನರ್‌ಗಳು ಬ್ಯಾಗ್ ಬಗ್ಗೆ ಹೆಚ್ಚು ಗಮನ ನೀಡುತ್ತಿದ್ದಾರೆ. ಬ್ಯಾಗ್ ಬಗೆಗಿನ ಕ್ರೇಜ್ ಪ್ರಾರಂಭವಾದದ್ದು ಬಂಟಿ ಔರ್ ಬಬ್ಲೀ ಚಿತ್ರದಿಂದ, ಅದರಲ್ಲಿ ರಾಣಿ ಮುಖರ್ಜಿಯು ಎಂಬ್ರಾಯಿಡರಿಯ ಬ್ಯಾಗ್ ಹಿಡಿದಿದ್ದಾಳೆ. ಈ ಸಲದ ಫ್ಯಾಶನ್ ವೀಕ್‌ನಲ್ಲೂ ಇಂತಹ ಬ್ಯಾಗ್‌ಗಳು ಸಾಕಷ್ಟು ಪ್ರದರ್ಶಿತವಾದವು.

ವಿಲ್ಸ್ ಲೈಫ್‌ಸ್ಟೈಲ್ ಇಂಡಿಯಾ ಫ್ಯಾಷನ್ ವೀಕ್ ಸ್ಪ್ರಿಂಗ್–ಸಮರ್ 2007ರಲ್ಲಿ ಭಾಗವಹಿಸಿದ ಫ್ಯಾಷನ್ ಡಿಸೈನರ್‌ಗಳು ತಮ್ಮ ಕಲೆಕ್ಷನ್‌ನ್ನು ಪ್ರಸ್ತುತಪಡಿಸಿದರು. ಹೆಚ್ಚಿನ ಡಿಸೈನರ್‌ಗಳು ತಮ್ಮ ಡಿಸೈನರ್ ವೇರ್ ಜೊತೆಗೆ ತಮ್ಮದೇ ಆದ ಆ್ಯಕ್ಸೆಸರೀಸ್‌ನ್ನೂ ಸಹ ಪ್ರಸ್ತುತಪಡಿಸಿ ಒಂದು ಕಂಪ್ಲೀಟ್ ಲುಕ್ ದೊರೆಯುವಂತೆ ಮಾಡಿದರು. ಬಟ್ಟೆಗೆ ಮ್ಯಾಚ್ ಆಗುವಂತಹ ಅಥವಾ ಅಂಥದೇ ಫ್ಯಾಬ್ರಿಕ್‌ನಿಂದ ತಯಾರಿಸಿದ ಬ್ಯಾಗ್ಸ್ ಮತ್ತು ಬಟ್ಟೆಯ ಮೇಲೆ ಮಾಡಲಾದ ಎಂಬ್ರಾಯಿಡರಿಯಿಂದ ಕೂಡಿದ ಬ್ಯಾಗ್ಸ್ ಸಹ ಇದ್ದವು. ಸಿಲ್ಕ್, ಟಸಾರ್, ಬ್ರೊಕೇಡ್ ಮತ್ತು ಜೂಟ್‌ನ ಬ್ಯಾಗ್‌ಗಳಿದ್ದು ಅವುಗಳನ್ನು ಸುಂದರವಾಗಿ ಕಾಣುವಂತೆ ಮಾಡಲು ಎಂಬ್ರಾಯಿಡರಿ, ರಾಜಾಸ್ತಾನಿ ಗೆಜ್ಜೆ, ಬುಕಿಸ್ಟ್, ಐಟಮ್, ಕವಡೆ, ಕಪ್ಪೆಚಿಪ್ಪು, ಲೇಸ್, ಪ್ರೆಶಿಯಸ್ ಸ್ಟೋನ್ ಮುಂತಾದವನ್ನು ಯಥೇಚ್ಛವಾಗಿ ಬಳಸಲಾಗುತ್ತದೆ.

**ಆಕರ್ಷಕ ವೆರೈಟಿ**

ಈಗ ಅಂಗಡಿಗಳಲ್ಲಿ ವೆಲ್ವೆಟ್, ಕಾಟನ್, ಕ್ಯಾನ್‌ವಾಸ್, ಜ್ಯೂಟ್, ಡೆನಿಮ್‌ನಿಂದ ತಯಾರಿಸಿದ ಲೇಟೆಸ್ಟ್ ಬ್ಯಾಗ್ ದೊರೆಯುತ್ತವೆ. ಕೆಲವರಿಗೆ ಬ್ರೈಟ್ ಕಲರ್ ಬ್ಯಾಗ್ ಇಷ್ಟವಾದರೆ, ಕೆಲವರಿಗೆ ಕಸೂತಿಯ ಕಾಟನ್ ಬ್ಯಾಗ್ ಮೆಚ್ಚುಗೆಯಾಗುತ್ತದೆ. ಸಿಂಪ್ಲಿಸಿಟಿಗೆ ಮಾರುಹೋದವರ ಆಯ್ಕೆ ಕ್ಯಾನ್‌ವಾಸ್ ಬ್ಯಾಗ್ ಮತ್ತು ಜೂಟ್ ಬ್ಯಾಗ್‌ಗಳಾದರೆ, ಮಾಡರ್ನ್ ಯುವತಿಯರು ಡೆನಿಮ್ ಬ್ಯಾಗ್‌ಗಳನ್ನು ಆರಿಸಿಕೊಳ್ಳುತ್ತಾರೆ.

ಈಗೆಲ್ಲಾ ದೊಡ್ಡ ಬ್ಯಾಗ್‌ಗಳು ಸಾಕಷ್ಟು ಡಿಮ್ಯಾಂಡ್‌ನಲ್ಲಿವೆ. ಹೆಸರಾಮತ ತಯಾರಕರು ದೊಡ್ಡದಾದ ಬ್ರಾಂಡೆಡ್ ಬ್ಯಾಗ್‌ಗಳನ್ನು ಮಾರುಕಟ್ಟೆಗೆ ತರುತ್ತಿದ್ದಾರೆ. ಜೋಳಿಗೆಯಂತಹ ಬ್ಯಾಗ್‌ಗಳು ಮತ್ತು ಪೋಲ್ಕಾ ಡಾಟ್ಸ್ ಇಂದು ಫ್ಯಾಷನ್‌ನಲ್ಲಿವೆ.

ಬ್ಯಾಗ್ ಡಿಸೈನರ್ ಪಾಶ್ಮಾ ಹೀಗೆ ಹೇಳುತ್ತಾರೆ, ಈಗ ವರ್ಕಿಂಗ್ ವಿಮೆನ್‌ಗಾಗಿ ವಿಶೇಷವಾಗಿ ತಯಾರಿಸಿದ ದೊಡ್ಡ ದೊಡ್ಡ ಬ್ಯಾಗ್‌ಗಳು ಫ್ಯಾಶನ್‌ನಲ್ಲಿವೆ. ಅವುಗಳಲ್ಲಿ ಲ್ಯಾಪ್‌ಟಾಪ್‌ನಿಂದ ಹಿಡಿದು ಎಲ್ಲಾ ಅಗತ್ಯ ಸಾಮಾನುಗಳನ್ನೂ ಇಡಬಹುದು ಇಂತಹ ಲೆದರ್ ಬ್ಯಾಗ್‌ನಲ್ಲಿ ಕ್ರೊಕೊಡೈಲ್ ಪ್ರಿಂಟ್ ಹೆಚ್ಚು ಚಾಲ್ತಿಯಲ್ಲಿವೆ.

ಈ ಬ್ಯಾಗ್‌ಗಳು ಕೊಂಚ ಹೆಚ್ಚು ಉದ್ದವಾಗಿದ್ದು ಮುಂಭಾಗದಲ್ಲಿ 3–4 ಪಾಕೆಟ್‌ಗಳಿರುತ್ತವೆ. ಪಾರ್ಟಿವೇರ್ ಈವ್ನಿಂಗ್ ಬ್ಯಾಗ್‌ಗಳು ಸಹ ಫ್ಯಾಷನ್‌ನಲ್ಲಿವೆ. ಇವುಗಳಲ್ಲಿ ಕ್ರೊಕೊಡೈಲ್ ಪ್ರಿಂಟ್ ಮತ್ತು ಪೈಥಾನಸ್ನೇಕ್ ಪ್ರಿಂಟ್ ಲೇಟೆಸ್ಟ್ ಆಗಿವೆ. ಈ ಬ್ಯಾಗ್‌ಗಲು ಚಿಕ್ಕದಾಗಿದ್ದು ಅವುಗಳ ಮೇಲೆ ದಪ್ಪ ಸ್ವರೋಸ್ಕಿ ಸ್ಟೋನ್ಸ್ ಅಳವಡಿಸಲಾಗಿರುತ್ತದೆ.

ಡ್ರೆಸ್‌ಗೆ ಮ್ಯಾಚ್ ಆಗುವಂತೆ ಬ್ಲ್ಯಾಕ್, ಬ್ಲೂ, ವೈಟ್, ಆಲಿವ್, ಪಿಂಕ್ ಮೊದಲಾದ ಯಾವುದೇ ಬಣ್ಣದಲ್ಲಿ ದೊರೆಯುತ್ತವೆ. ಕ್ರಂಚ್ ಲೆದರ್‌ನ ಬ್ಯಾಗ್‌ಗಳು ಹಗುರವಾದ ಚರ್ಮದಿಂದ ಮಾಡಲ್ಪಟ್ಟಿರುತ್ತವೆ ಮತ್ತು ಮೇಲೆ ಡಲ್ ಮೆಟಾಲಿಕ್ ಟಚ್ ಕೊಡಲಾಗಿರುತ್ತದೆ.

**–ಸುಧಾ ಹರೀಶ್**

## ಕಿವಿಮಾತು

ಪ್ರಶ್ನೋತ್ತರದಲ್ಲಿ ಪಾಲ್ಗೊಂಡು, ನಿಮ್ಮ ಅತ್ತಿಗೆಗೆ ನೀವು ಸ್ನೇಹಿತೆಯೋ, ತಲೆನೋವೊ ಎನ್ನುವುದನ್ನು ಸ್ವಯಂ ಪರೀಕ್ಷಿಸಿಕೊಳ್ಳಿ.

ನಿಮ್ಮ ಸ್ಕೋರ್ 75ಕ್ಕಿಂತ ಹೆಚ್ಚಾಗಿದ್ದರೆ ನೀವು ಅಭಿನಂದನೆಗೆ ಅರ್ಹರು. ಏಕೆಂದರೆ ನಿಮ್ಮ ಅತ್ತಿಗೆ ನಿಮ್ಮನ್ನು ಪ್ರೀತಿಯ ಗೆಳತಿ ಎಂದು ಭಾವಿಸುವುದರ ಜೊತೆಗೆ ತನ್ನಲ್ಲಿ ಸಹಾನುಭೂತಿ ಉಳ್ಳವಳು ಎಂದು ತಿಳಿದಿರುತ್ತಾಳೆ. ನಿಮ್ಮಂತಹ ನಾದಿನಿಯನ್ನು ಪಡೆದು ತಾನು ಧನ್ಯ ಎಂದು ಭಾವಿಸುತ್ತಾಳೆ.

ನಿಮ್ಮ ಸ್ಕೋರ್ 55 ರಿಂದ 75ರ ನಡುವೆ ಇದ್ದರೆ ನಿಮ್ಮ ಸ್ಥಿತಿ ಅಷ್ಟೇನೂ ಕೆಟ್ಟದಾಗಿಲ್ಲ. ನೀವು ತವರಿಗೆ ಹೋದರೆ ನಿಮ್ಮ ಅತ್ತಿಗೆ ಖುಷಿಯನ್ನೇ ನೋಪಡುತ್ತಾರೆ. ಆದರೆ ಅವರಿಗೆ ಅಷ್ಟಿಷ್ಟು ಆತಂಕಕೂಡ ಆಗುತ್ತದೆ. ಏಕೆಂದರೆ ಯಾವುದೋ ಮಾತಿಗೆ ನೀವು ಎಲ್ಲಿ ತಪ್ಪು ಭಾವಿಸುತ್ತೀರೊ ಎಂಬ ಅಳುಕು ಇರುತ್ತದೆ. ಸ್ವಲ್ಪ ಪ್ರಯತ್ನದಿಂದ ನಿಮ್ಮಿಬ್ಬರ ಸಂಬಂಧ ಸುಧಾರಣೆಯಾಗುವ ಸಾಧ್ಯತೆ ಇದೆ.

ನಿಮ್ಮ ಸ್ಕೋರ್ 35 ರಿಂದ 55ರ ನಡುವೆ ಇದ್ದರೆ ನೀವು ನಿಮ್ಮ ವರ್ತನೆಯ ಬಗ್ಗೆ ಗಮನ ಕೊಡಬೇಕಾದ ಅಗತ್ಯತೆ ಇದೆ. ಇದರಿಂದ ನಿಮ್ಮ ಸಂಬಂಧ ಉತ್ತಮಗೊಳ್ಳದಿದ್ದರೂ ಅವರ ಮನಸ್ಸಿನಲ್ಲಿ ಕಹಿ ಭಾವನೆಯಾದರೂ ಉಂಟಾಗುವುದಿಲ್ಲ. ನಿಮ್ಮ ಸ್ಕೋರ್ 35ಕ್ಕಿಂತ ಕಡಿಮೆಯಾದಲ್ಲಿ ನೀವು ನಿಮ್ಮ ಅತ್ತಿಗೆಗೆ ತೊಂದರೆಕೊಡುವವರೇ ಹೊರತು ಬೇರೆನಲ್ಲ. ಅದನ್ನು ಅನಿವಾರ್ಯವಾಗಿ ಸಹಿಸಿಕೊಳ್ಳಬೇಕಾಗುತ್ತದೆ.

ಆದರೆ ಪ್ರಯತ್ನದಿಂದ ಪ್ರತಿಯೊಂದು ಕಠಿಣ ಕೆಲಸವನ್ನು ಸುಲಭಗೊಳಿಸಬಹುದಾಗಿದೆ. ಹೀಗಾಗಿ ನೀವು ಆತ್ಮಾವಲೋಕನ ಮಾಡಿಕೊಂಡು ಅತ್ತಿಗೆಯೊಂದಿಗೆ ನಿಮ್ಮ ಸಂಬಂಧ ಸುಧಾರಿಸಿಕೊಳ್ಳುವ ಪ್ರಯತ್ನ ಮಾಡಿ, ಅವರಲ್ಲಿ ಏನೂ ಲೋಪ ಹುಡುಕದೇ ಅವರ ಗುಣಗಳನ್ನು ಪ್ರಶಂಸಿಸಿ, ನಿಜವಾಗಿಯೂ ಪರಿಣಾಮ ಒಳ್ಳೆಯದಾಗಿರುತ್ತದೆ.

ಇದಕ್ಕೆ ಸಂಬಂಧಿಸಿದಂತೆ ಆಸಕ್ತ ಮಹಿಳೆಯರು ಉತ್ತರವನ್ನು ಕಳುಹಿಸಬಹುದೆ? ಎಂದು ಕೋರಿರುವುದರ ಮೇರೆಗೆ ನಿಮ್ಮ ಉತ್ತರವನ್ನು ಕಳುಹಿಸಿಕೊಡಬಹುದೆಂದು ಉತ್ತಮ ಉತ್ತರಗಳನ್ನು ಕಳುಹಿಸಿದವರ ಹೆಸರಿನೊಂದಿಗೆ ಮುಂದಿನ ಸಂಚಿಕೆಯಲ್ಲಿ ಸರಿಯಾದ ಉತ್ತರವನ್ನು ಪ್ರಕಟಿಸಲಾಗುವುದು.

**–ಶ್ರೀಮತಿ ವತ್ಸಲ, ಬೆಂಗಳೂರು**

## ತಾಯಿ

ತಾಯಿ ತಾಯಿ ಎಂದು
ಎಲ್ಲರಲ್ಲೂ ಹೇಳುವಿರಿ
ಮನೆಯಲ್ಲಿ ಅವಳಿಗಿಲ್ಲ ಮಾನ್ಯತೆ
ತಾಯಿ ದೇವರು ಎಂದು ಹೇಳುವಿರಿ
ಹೆಂಡತಿ ಬಂದ ಮೇಲೆ ಅವಳೇ ದೇವರು
ತಾಯಿ ನಮಗೆ ಅನ್ನ
ನೀಡಿ ಬೆಳೆಸುವಳು
ನಾವು ಕಡೆಗೆ ಗಂಜಿ
ಕೂಡ ನೀಡೆವು ಅವಳಿಗೆ
ತಾಯಿ ಹೃದಯ
ಪ್ರೇಮ ಹೃದಯ ಎನ್ನುವೆವು
ನಾವು ಅವಳನ್ನು ನಿಂದಿಸಿ
ನೀಡುವೆವು ನೋವು
ಎಲ್ಲರಲ್ಲೂ ಮಾತಿಗೆ ತಪ್ಪಿಸಿಕೊಳ್ಳಲು
ಬಿಡುವೆವು ತಾಯಿ ಮೇಲೆ ಆಣೆ
ಮನೆಗೆ ಬಂದರೆ ಅವಳ
ಮೇಲೆ ಮಾಡುವೆವು ದಾಂಧಲೆ

**– ಎನ್. ಶಾಂತಕುಮಾರಿ, ಮೈಸೂರು**

## ರೀ... ಸ್ವಲ್ಪ ನಗೀ ಪ್ಲೀಸ್

ಹೆಣ್ಮಕ್ಕಳು ಗುಸುಗುಸು ಪಿಸುಪಿಸು ಅಂತ ಮಾತಾಡ್ತಾ ಇದ್ದಾರೆ ಅಂದ್ರೆ Data Transfer ಆಗ್ತಾ ಇದೆ ಅಂಥ ಅರ್ಥ.

ಅಯ್ಯೋ ಹೋಗ್ಲಿ ಬಿಡಮ್ಮಾ ಕಂಡೋರ ವಿಷ್ಯ ನಮಗ್ಯಾಕೆ ಅಂದ್ರೆ Data Transfer Complete ಆಯ್ತು ಅಂಥ ಅರ್ಥ

ಮಾಡ್ದೋರ್ ಪಾಪ ಆಡ್ದೋರ್ ಬಾಯಲ್ಲಿ ಅಂಥ ನಮಗ್ಯಾಕೆ ಅಂದ್ರೆ Data Seved Succesfully ಅಂಥ ಅರ್ಥ

ಸರಿ ನಾನಿನ್ನೂ ಹೊರಡ್ತೀನಿ ತುಂಬಾ ಕೆಲ್ಸ ಇದೆ ಅಂದ್ರೆ Data Viral ಆಗೋ ಎಲ್ಲಾ ಲಕ್ಷಣಗಳು ಶುರು ಅಂಥ ಅರ್ಥ

**–ಸೌಭಾಗ್ಯ, ಮೈಸೂರು**

## ಮಹಿಳಾ ವಿಶೇಷ

ನಂ. 136, ಶ್ರೀ ನೀಲಕಂಠಸ್ವಾಮಿ ಮಠ,
ಗನ್‌ಹೌಸ್ ಎದುರು, ಖಿಲ್ಲೆ ಮೊಹಲ್ಲಾ,
ಮೈಸೂರು 570004, **ಮೊ: 9243584444**

RNI No. KARKAN/2015/71642 KA/SK/MYS/109/2017-2019

D DHANASHRI MULTISTATE CO-OPERATIVE CREDIT SOCIETY LTD.

।। सहकारातून समृद्धीकडे ।।

## DDMCL

### ದುಡಿಯಲು ಬಯಸುವವರಿಗೆ ಸುವರ್ಣಾವಕಾಶ

ಯಾವುದೇ ವಿದ್ಯಾರ್ಹತೆಯುಳ್ಳ ಮಹಿಳಾ ಹಾಗೂ ಪುರುಷ ಅಭ್ಯರ್ಥಿಗಳಿಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮುನ್ನಡೆಯುವ ಅವಕಾಶ...

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ
ಮೊ: 92435 84444
99728 33540 99728 33540
94489 01852 97413 98108

# MIRACLE HEALTH PROGRAM



**Interested Persons Please contact**

Smt. Deepika M: 9972833540
Smt. Soubhagya M: 9448901852
Smt. Leela M: 9741398108




Herbal Medicine Invented
by
**S.M. Raju IAS**

Book Post

To

From
Mahila Vishesha
No. 136, Sri Neelakantamutt
Opp. to Gunhouse, Kille Mohalla
Mysuru - 570004

Edited, Published and Owned by H.V.Venkatasubbarao, No.1021, 14th Cross, 2nd Stage, Hebbal, Mysore- 570017 and Printed by B.S.Meera and Printed at Annapuoorna Offset Printers, No.511, 14th Main, Saraswathipuram, Mysore-570009
Published at No.1021, 14th Cross, 2nd Stage, Hebbal, Mysore-570017. Email:mahilavishesha15@gmail.com Web:www.mahilavishesha.in Editor:H.V.Venkatasubbarao Mob: 8880334444 / 9243584444 RNI No:KARKAN/2015/71642